1. ಅಧ್ಯಕ್ಷರ ಅಪ್ಪಣೆ ಮೇರೆಗೆ

(ಆ) ವಿಷಯ: **ಶ್ರೀ ಸಿದ್ದರಾಮಯ್ಯ, ಮಾಜಿ ಉಪ ಮುಖ್ಯಮಂತ್ರಿಗಳು, ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತಿರುವುದರ ಬಗ್ಗೆ ಸದನದಲ್ಲಿ ಹೇಳಿಕೆ ನೀಡಲು ಅನುಮತಿ ಕೋರಿ ಒತ್ತಾಯ ಮತ್ತು ಧರಣಿ.**

ಶ್ರೀ ಎಸ್. ಸಿದ್ದರಾಮಯ್ಯ (ಚಾಮುಂಡೇಶ್ವರಿ) : ಮಾನ್ಯ ಅಧ್ಯಕ್ಷರೆ, I want to make a submission. ನಾನು ಈಗಾಗಲೇ ತಮ್ಮ ಗಮನಕ್ಕೆ ಕೂಡ ತಂದಿದ್ದೇನೆ. ನಾನು ನಿಮಗೆ ಒಂದು ಪತ್ರವನ್ನೂ ಕೂಡ ಕಳುಹಿಸಿ ಕೊಟ್ಟಿದ್ದೇನೆ. ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಕೇಳಿ, ಕೇಳುವುದಕ್ಕೆ ತಯಾರಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಪತ್ರವನ್ನು ಕಳುಹಿಸಿ ಕೊಟ್ಟಿದ್ದೀರಿ ಅಂದ ತಕ್ಷಣ ನನಗೆ ಅರ್ಥವಾಯಿತು. ನಿಯಮ 200ರ ಪ್ರಕಾರ....

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಅವರು ಏನು ಪತ್ರ ಕಳುಹಿಸಿದ್ದಾರೆಂಬುದಾದರೂ ಕೇಳಿ.

ಅಧ್ಯಕ್ಷರು : ಕೂಡ್ರಿ ಸುಮ್ಮನೆ. ಹಿರಿಯ ಸದಸ್ಯರು ಎಂದು ಹೇಳುತ್ತೀರಿ ಎಲ್ಲದಕ್ಕೂ ಎದ್ದು ನಿಲ್ಲುತ್ತೀರಿ.

ಶ್ರೀ ಬಸವರಾಜ ರಾಯರೆಡ್ಡಿ : xx ನಾವೇನು ನಿಮ್ಮ x ?

MR. SPEAKER : I will name you. ಏನು ತಮಾಷೆ ಮಾಡುತ್ತಿದ್ದೀರಾ?

(ಅಡಚಣೆ)

ಅಧ್ಯಕ್ಷರು : ಎಲ್ಲ ಹಿರಿಯ ಸದಸ್ಯರು ಹಿರಿಯ ಸದಸ್ಯರು ಎಂದು ಹೇಳುತ್ತೀರಿ ಏನು ಹಿರಿತನ? ಒಂದು ಮಾತು ಹೇಳುತ್ತೇನೆ ನಿಯಮ 200ರ ಪ್ರಕಾರ ರಾಜೀನಾಮೆಯನ್ನು ಅಧ್ಯಕ್ಷರಿಗೆ ಕೊಡಬಹುದು. ಆ ರಾಜೀನಾಮೆ ಪತ್ರದಲ್ಲಿ ಯಾವುದೇ ಕಾರಣವನ್ನು ಅವರು ನಮೂದಿಸುವ ಹಾಗಿಲ್ಲ. ಒಂದು ವೇಳೆ ನಮೂದಿಸಿದ್ದರೆ ಅದೆಲ್ಲವನ್ನು ಹೊಡೆದು ಹಾಕುವಂಥದ್ದು. ಸದನಕ್ಕೂ ಅದನ್ನು ತಿಳಿಸುವ ಹಾಗಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು 202ರ ನಿಯಮಾವಳಿಯನ್ನು ನೋಡಿದ್ದೇನೆ.

ಅಧ್ಯಕ್ಷರು : ಹೇಳಿ.

---

x ಈ ಪದಗಳನ್ನು ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, 202ರ ನಿಯಮಾವಳಿಯನ್ನು ನಾನು ಓದಿದ್ದೇನೆ. ನೋಡಿದ್ದೇನೆ. ರಾಜೀನಾಮೆ ಪತ್ರದಲ್ಲಿ ಯಾವುದೇ ಕಾರಣಗಳನ್ನು ಕೊಡಬಾರದು ಎಂದು ಹೇಳಿದೆಯೇ ಹೊರತು ನಾನು ಇವೊತ್ತು ಸದನ ನಡೆಯತಕ್ಕಂಥ ಸಂದರ್ಭದಲ್ಲಿ ಇನ್ನೂ ಸದನ ನಡೆಯತಕ್ಕಂಥ ಅವಕಾಶ ಇರುವುದರಿಂದ ನಾನು ಇವೊತ್ತು ರಾಜೀನಾಮೆಯನ್ನು ಕೊಡುವುದಕ್ಕೆ ನಿರ್ಧಾರ ಮಾಡಿದ್ದೇನೆ. ನಿಮಗೆ ನಾನು ನನ್ನ ರಾಜೀನಾಮೆ ಪತ್ರವನ್ನು ನಿಮ್ಮ ಕೊಠಡಿಗೆ ಬಂದು ಸಲ್ಲಿಸುತ್ತಿದ್ದೇನೆ. ಸದನ ನಡೆಯುತ್ತಿರುವುದರಿಂದ ಸದನದಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳು ಇರುವುದರಿಂದ, ನನ್ನ ಕರ್ತವ್ಯವೆಂದು ನಾನು ಭಾವಿಸಿಕೊಂಡಿದ್ದೇನೆ. ನಿಯಮಾವಳಿ 202ರಲ್ಲಿ ಸ್ಟೇಟ್‌ಮೆಂಟ್ ಮಾಡಬೇಕು, ಮಾಡಬಾರದು ಎನ್ನತಕ್ಕಂಥದ್ದೇನಿಲ್ಲ. ಒಂದು ವೇಳೆ ಮಾಡಬಾರದು ಎಂದು ಇದ್ದರೂ ಕೂಡ ಯಾವುದೇ ನಿಯಮಾವಳಿಗಳನ್ನು ಬದಿಗೊತ್ತಿ ನಿಮಗೆ ಅವಕಾಶ ಕೊಡುವುದಕ್ಕೆ ಅಧಿಕಾರವಿದೆ ಮಾನ್ಯ ಅಧ್ಯಕ್ಷರೇ. ಆದುದರಿಂದ ನನಗೆ ಸದನದ ಮಾನ್ಯ ಸದಸ್ಯರುಗಳಿಗೆ ತಿಳಿಸುವುದಕ್ಕೋಸ್ಕರ, ಈ ರಾಜ್ಯದ ಜನತೆಗೆ ತಿಳಿಸುವುದಕ್ಕೋಸ್ಕರ, ನನ್ನ ಕ್ಷೇತ್ರದ ಜನಗಳು ನನ್ನನ್ನು ಐದು ವರ್ಷಗಳ ಕಾಲ ಶಾಸಕನಾಗಿ ಇರಬೇಕೆಂದು ಮತ ಕೊಟ್ಟು ಕಳುಹಿಸಿದ್ದರು. ಆಶೀರ್ವಾದ ಮಾಡಿ ಕಳುಹಿಸಿದ್ದರು. ಆದರೆ ನನಗೆ ಐದು ವರ್ಷಗಳ ಕಾಲ ಶಾಸಕನಾಗಿ ಇರುವುದಕ್ಕೆ ಆಗದೇ ಇರತಕ್ಕಂಥ ರಾಜಕೀಯ ಸನ್ನಿವೇಶ ನಿರ್ಮಾಣವಾದ್ದರಿಂದ, ಬಲವಾದಂಥ ಕಾರಣಗಳು ಬಂದದ್ದರಿಂದ ಇವೊತ್ತು ನಾನು ಅನಿವಾರ್ಯವಾಗಿ ಜೆ.ಡಿ.(ಎಸ್.) ಪಕ್ಷಕ್ಕೆ ರಾಜೀನಾಮೆಯನ್ನು ಕೊಡತಕ್ಕಂಥ ಪರಿಸ್ಥಿತಿ ಇದೆ ಮತ್ತು ನನ್ನ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನಾನು ಕೊಡುತ್ತಿದ್ದೇನೆ. ಆ ಕಾರಣದಿಂದ ನನಗೆ ನನ್ನ ಹೇಳಿಕೆಯನ್ನು ಕೊಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ನನ್ನ ವಿನಮ್ರವಾದಂಥ ವಿನಂತಿಯನ್ನು ನಿಮ್ಮಲ್ಲಿ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರೇ, ನಿಯಮ 202ರಲ್ಲಿ ಸ್ಪಷ್ಟವಾಗಿದೆ. ರಾಜೀನಾಮೆಯನ್ನು ಕೊಡಲು ರಾಜೀನಾಮೆ ಪತ್ರವನ್ನು ಏನು ಕೊಡುತ್ತಾರೋ ಅದರಲ್ಲಿಯೇ ಯಾವುದೇ ಕಾರಣಗಳನ್ನು ಹೇಳಬಾರದು. ಒಂದು ಸಮಯ ಕಾರಣಗಳನ್ನು ಹೇಳಿದ್ದರೆ, ಅದನ್ನು ತೆಗೆದುಹಾಕಿ, ಸದನಕ್ಕೆ ಹೇಳತಕ್ಕಂಥ ಸಂದರ್ಭದಲ್ಲಿ ಅದ್ಯಾವುದನ್ನೂ ಸಹ ಸದನಕ್ಕೆ ಹೇಳಬಾರದು. ಕೇವಲ ರಾಜೀನಾಮೆಯನ್ನು ಇಂಥವರು ಕೊಟ್ಟಿದ್ದಾರೆ ಎಂದು ಮಾತ್ರ ವಿಚಾರ ಹೇಳಬೇಕು ಎಂದು ನಿಯಮ 202ರಲ್ಲಿ ಸ್ಪಷ್ಟವಾಗಿ ಹೇಳಿದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಿಯಮ 202ರಲ್ಲಿ ಏನು ಹೇಳಲಾಗಿದೆಯೆಂದರೆ:

> "A member who desires to resign his seat in the House shall intimate in writing under his hand addressed to the Speaker, his intention to resign his seat in the House in the following form and shall not give any reason for his resignation."

ಎಂದು ಹೇಳಲಾಗಿದೆಯೇ ಹೊರತು ಸದನದಲ್ಲಿ ಸ್ಟೇಟ್‌ಮೆಂಟ್ ಮಾಡಬಾರದು ಎಂದು ಎಲ್ಲಿದೆ ಸ್ವಾಮಿ?

ಅಧ್ಯಕ್ಷರು : ಮಾಡಬೇಕು ಎಂದು ಎಲ್ಲಿದೆ?

ಶ್ರೀ ಸಿದ್ದರಾಮಯ್ಯ : ಅದಕ್ಕೋಸ್ಕರವೇ ತಮ್ಮಲ್ಲಿ ನಾನು ಮನವಿಯನ್ನು ಮಾಡುತ್ತಿರತಕ್ಕಂಥದ್ದು. ಅದಕ್ಕಾಗಿಯೇ ನಿಮ್ಮಲ್ಲಿ ನಾನು ವಿನಂತಿಯನ್ನು ಮಾಡುತ್ತಿರುವುದು. ನನಗೆ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು. ದಯಮಾಡಿ ಕೊಡಿ.

ಅಧ್ಯಕ್ಷರು : ನಿಯಮಗಳ ಪ್ರಕಾರ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಸಿದ್ದರಾಮಯ್ಯ : ಅವಕಾಶವಿಲ್ಲ ಎಂದು ಎಲ್ಲಿದೆ? There is not mandatory provision as such.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ದರಾಮಯ್ಯನವರು 2004ರ ಚುನಾವಣೆಯಲ್ಲಿ ಆರಿಸಿ ಬಂದಿದ್ದಾರೆ. ಆದರೆ ಇವೊತ್ತು ಕಾರಣಾಂತರಗಳಿಂದ ಅವರು ರಾಜೀನಾಮೆಯನ್ನು ಕೊಡುವುದಕ್ಕೆ ಸಿದ್ಧರಾಗಿದ್ದಾರೆ. ಈ ರಾಜ್ಯದ ಉಪ ಮುಖ್ಯಮಂತ್ರಿಗಳಾಗಿ ಮತ್ತು ಹಣಕಾಸಿನ ಸಚಿವರಾಗಿ ಅವರು ಕೆಲಸವನ್ನು ಮಾಡಿದ್ದಾರೆ. ಅವರು ಹಣಕಾಸಿನ ಮಂತ್ರಿಗಳಾಗಿ ಯಾವ ರೀತಿಯಲ್ಲಿ ಕೆಲಸವನ್ನು ಮಾಡಿದ್ದಾರೆ ಎಂಬುದು ಜನರಿಗೆಲ್ಲರಿಗೂ ಗೊತ್ತಿದೆ. ತಾವು ಅವಕಾಶ ಕೊಟ್ಟಾಗ ನಾವು ಹೇಳುವವರಿದ್ದೇವೆ. ಇವೊತ್ತಿನ ಈ ಒಂದು ಸನ್ನಿವೇಶದಲ್ಲಿ 2008–09ರಲ್ಲಿ ಬರುವ ಚುನಾವಣೆ ಅಥವಾ ಅದಕ್ಕೂ ಮುಂಚೆಯೇ ಚುನಾವಣೆ ಬರುತ್ತದೋ ಏನೋ ಹೇಳುವುದಕ್ಕಾಗುವುದಿಲ್ಲ. ಇಂಥ ಒಂದು ಸಂದರ್ಭದಲ್ಲಿ ರಾಜೀನಾಮೆಯನ್ನು ಕೊಡುವುದಕ್ಕೆ ಅವರು ನಿಂತಿದ್ದಾರೆ. ನಾವು ಅವರ ಜೊತೆಯಲ್ಲಿ ಕೂಡ ಕೆಲಸವನ್ನು ಮಾಡಿದ್ದೇವೆ. ಇವೊತ್ತು ಇಂಥ ಒಂದು ರಾಜಕೀಯ ಪರಿಸ್ಥಿತಿಯಲ್ಲಿ ವಿಚಿತ್ರವಾದಂಥ ಸನ್ನಿವೇಶ ಕರ್ನಾಟಕದಲ್ಲಿ ನಿರ್ಮಾಣವಾಗಿದೆ ಅವರು ರಾಜ್ಯದ ಒಬ್ಬ ಹಿರಿಯ ನಾಯಕರಾಗಿ ಸಮಾಜವಾದದಲ್ಲಿ ಹೆಚ್ಚಿನ ಆಸಕ್ತಿಯನ್ನು ಇಟ್ಟುಕೊಂಡು ಕೆಲಸವನ್ನು ಮಾಡತಕ್ಕಂಥ ಒಬ್ಬ ಹೋರಾಟಗಾರ. ಇವೊತ್ತು ಅಧಿವೇಶನದಲ್ಲಿ ಅವರ ಕೊನೆಯ ದಿನ. ಇವೊತ್ತು ರಾಜೀನಾಮೆಯನ್ನು ಕೊಡುತ್ತಿದ್ದಾರೆ. ಮುಂದೆ ಆಗತಕ್ಕಂಥ ನಿರ್ಮಾಣ ಕಾಲದಲ್ಲಿ ಅದೇನೇ ಇರಲಿ, ಇವೊತ್ತಿನ ದಿವಸ ಅಧಿವೇಶನದಲ್ಲಿ ಇರುವುದು ಅವರು ಕಡೆಯ ದಿನವಾದ್ದರಿಂದ ಅವರಿಗೆ ಸ್ಟೇಟ್‌ಮೆಂಟ್ ಮಾಡಲು ಅವಕಾಶವನ್ನು ಕೊಡಲೇಬೇಕು. ಮಾನ್ಯ ಸಿದ್ದರಾಮಯ್ಯನವರಿಗೆ ಯಾವ ರಾಜಕೀಯ ಒತ್ತಡ, ಈ ರಾಜ್ಯದಲ್ಲಿರತಕ್ಕಂಥ ರಾಜಕೀಯ ಪರಿಸ್ಥಿತಿ, ಈಗ ರಾಜೀನಾಮೆಯನ್ನು ಕೊಡತಕ್ಕಂಥ ಸಮಯದಲ್ಲಿ ಅವರು ಹೇಳುವುದಕ್ಕೆ ಅವಕಾಶವನ್ನು ತಾವು ಕಲ್ಪಿಸಿಕೊಡಲೇಬೇಕು. ಆ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) : ಮಾನ್ಯ ಅಧ್ಯಕ್ಷರೆ, ತಾವು ನಿಯಮಾವಳಿ ಪ್ರಕಾರ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದೀರಿ. ಹಿರಿಯ ರಾಜಕಾರಣಿಗಳಾದ ಸಿದ್ದರಾಮಯ್ಯನವರು ಜೆ.ಡಿ.ಎಸ್. ಗೆ ರಾಜೀನಾಮೆಯನ್ನು ಕೊಡುತ್ತೇನೆ ಎಂದು ಹೇಳುತ್ತಿದ್ದಾರೆ. ಅವರ ರಾಜಕೀಯ ವಿಚಾರ, ಅವರು ಹೊರಗಡೆ ಹೇಳುವುದಕ್ಕೆ ಅಭ್ಯಂತರವಿಲ್ಲ. ಆ ಸದನವನ್ನು ಅದನ್ನು ಹೇಳಲು ಉಪಯೋಗ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ಏಕೆಂದರೆ ಇಲ್ಲಿ ಯಾವ ಪಕ್ಷಕ್ಕೆ ಸೇರುತ್ತೇವೆ, ಯಾವ ಪಕ್ಷಕ್ಕೆ ರಾಜೀನಾಮೆ ಕೊಡುತ್ತೇವೆ ಎನ್ನುವಂಥ ಅಂಶ ವೈಯಕ್ತಿಕವಾದ ಅವರ ವಿಚಾರವಾಗುತ್ತದೆಯೇ ವಿನಃ ಈ ಸದನದಲ್ಲಿ ಆ ಪ್ರಶ್ನೆ ಬರುವುದಿಲ್ಲ. ಇಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುವಂಥ ಅಂಶದ ಬಗ್ಗೆ ಬಂದಾಗ ತುಂಬಾ ಸ್ಪಷ್ಟವಾಗಿ ನಿಯಮ 202ರ ಪ್ರಕಾರ ಅವರು ರಾಜೀನಾಮೆಯನ್ನು ತಮಗೆ ಕೊಡುವಂಥ ಅಧಿಕಾರ ಅವರಿಗಿದೆ. ಆ ಪ್ರಕಾರ ಅವರು ರಾಜೀನಾಮೆಯನ್ನು ಕೊಟ್ಟುಕೊಳ್ಳಲಿ. ಏಕೆ ರಾಜೀನಾಮೆಯನ್ನು ಕೊಡುತ್ತೇನೆ ಎನ್ನುವಂಥ ಅಂಶವನ್ನು ಅವರ ಕ್ಷೇತ್ರದ ಜನತೆಗೆ ತಿಳಿಸಬೇಕು, ರಾಜ್ಯದ ಜನತೆಗೆ ತಿಳಿಸಬೇಕು ಎಂದಿದ್ದಾರೆ. ಹೌದು, ಅದಕ್ಕೆ ಹೊರಗಡೆ ಪತ್ರಿಕಾಗೋಷ್ಠಿಯನ್ನು ಕರೆದು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವರಿಗೆ ಅವಕಾಶವಿದೆ. ಆ ಪ್ರಕಾರ ಅವರು ಮಾಡಿಕೊಳ್ಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ರೂಲ್ 332ರಲ್ಲಿ ವೈಯಕ್ತಿಕ ವಿವರಣೆಯನ್ನು ಕೊಡಬಹುದು. ರಾಜೀನಾಮೆಯನ್ನು ಕೊಟ್ಟು ವೈಯಕ್ತಿಕ ವಿವರಣೆಯನ್ನು ಕೊಟ್ಟು ಅವರು ಹೊರಗಡೆ ಹೋಗುತ್ತಾರೆ. ಅದಕ್ಕಾಗಿ ತಾವು ಇದನ್ನು ಗಮನಿಸಬೇಕು. ಸದಸ್ಯರು ಅಧ್ಯಕ್ಷರ ಅನುಮತಿಯನ್ನು ಪಡೆದು ಒಂದು ವಿಷಯವು ಸದನದ ಮುಂದೆ ಚರ್ಚೆಗೆ ಬಂದಿರದಿದ್ದರೂ ಆ ಬಗ್ಗೆ ತಮ್ಮ ವೈಯಕ್ತಿಕ ವಿವರಣೆಯನ್ನು ನೀಡಬಹುದು, ಆದರೆ ಹಾಗೆ ಮಾಡುವಾಗ ಯಾವುದೇ ಚರ್ಚಾಸ್ಪದ ಅಂಶವನ್ನು ತರತಕ್ಕದಲ್ಲ ಮತ್ತು ಆ ಬಗ್ಗೆ ಯಾವ ಚರ್ಚೆಗೂ ಅವಕಾಶ ನೀಡತಕ್ಕದಲ್ಲ ಎಂದು ನಿಯಮ 332ರಲ್ಲಿ ಹೇಳಲಾಗಿದೆ. ಅದಕ್ಕಾಗಿಯೇ ನಾನು ಹೇಳುತ್ತಿರುವುದು, ಅವರು ವೈಯಕ್ತಿಕವಾದ ವಿವರಣೆಯನ್ನು ಕೊಡುತ್ತಾರೆ. ತಾವು ದಯವಿಟ್ಟು ಅದಕ್ಕೆ ಅವಕಾಶವನ್ನು ಕೊಡಿ. ಇದು ಒಂದು courtesy, and I hopr that ತಾವು ಇಷ್ಟು ಸೀನಿಯರ್ ಆಗಿದ್ದೀರಿ, ಆತ್ಮೀಯರೂ, ಒಬ್ಬರಿಗೊಬ್ಬರು ಬಹಳ ಪರಿಚಯ, ಒಂದೇ ಆಫೀಸ್‌ನಲ್ಲಿ ಪ್ರಾಕ್ಟೀಸ್ ಮಾಡಿದಂಥವರು, ಕೇವಲ ಒಂದು ವಿವರಣೆಯನ್ನು ಕೊಡುವುದಕ್ಕೂ ಅವಕಾಶವನ್ನು ಕೊಡುವುದಿಲ್ಲವೆಂದರೆ ಇದೊಂದು ಅನ್ಯಾಯವಾಗುತ್ತದೆ. ನಿಯಮ 332ರಲ್ಲಿ ಕೂಡ ಸ್ಪಷ್ಟವಾಗಿ ಇದೆ.

ಅಧ್ಯಕ್ಷರು : ನಿಯಮ 332ರಲ್ಲಿ ಸದಸ್ಯರು ಅಧ್ಯಕ್ಷರ ಅನುಮತಿ ಪಡೆದು ಸದನದ ಮುಂದೆ ಚರ್ಚೆಗೆ ಬಂದಿರದಿದ್ದರೂ ಆ ಬಗ್ಗೆ ತಮ್ಮ ವೈಯಕ್ತಿಕ ವಿವರಣೆ ನೀಡಬಹುದು. ಆದರೆ ಹಾಗೆ ಮಾಡುವಾಗ ಆ ಬಗ್ಗೆ ಯಾವ ಚರ್ಚೆಗೂ ಅವಕಾಶವಿಲ್ಲವೆಂದು ಇದೆ. ಆದರೆ ಯಾವುದೇ ಒಂದು ವಿಷಯಕ್ಕೆ ಸಂಬಂಧಪಟ್ಟದ್ದಲ್ಲ, ಚರ್ಚೆಯು ವಸ್ತುವಲ್ಲ. ನೀವು ಏನು ಹೇಳುತ್ತಿದ್ದೀರೆಂದರೆ ಡಿಫರೆಂಟ್ ಕನ್‌ಟೆಕ್ಸ್ಟ್‌ನಲ್ಲಿ 332ರ ನಿಯಮವನ್ನು ಓದುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವೇ ಹೀಗೆ ಮಾಡಿದರೆ ಹೇಗೆ?

ಅಧ್ಯಕ್ಷರು : ಇದು ಯಾವುದೇ ಚರ್ಚೆಯ ವಸ್ತುವಲ್ಲ. ಇದು ಅವರ ರಾಜೀನಾಮೆ ಪ್ರಶ್ನೆಯ ವಿಚಾರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಲೂ ಅವಕಾಶ ಕೊಡಿ.

ಶ್ರೀ ಬಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಿದ್ದರಾಮಯ್ಯನವರು ಪತ್ರಿಕೆಗಳಲ್ಲಿ ಎಲ್ಲಾ ಹೇಳಿಕೆಗಳನ್ನು ಕೊಟ್ಟುಬಿಟ್ಟಿದ್ದಾರೆ. ಮತ್ತೆ ಇಲ್ಲಿ ಅದು ಏಕೆ? ಏಕೆ ರಾಜೀನಾಮೆಯನ್ನು ಕೊಡುತ್ತಿದ್ದೇನೆ ಎಂಬ ಬಗ್ಗೆ ಈಗಾಗಲೇ ಪತ್ರಿಕೆಗಳಲ್ಲಿ ಹೇಳಿ ಬಿಟ್ಟಿದ್ದಾರೆ.

ಅಧ್ಯಕ್ಷರು : ಈಗ ಸಭಾನಾಯಕರು ಏನನ್ನೋ ಹೇಳುವವರಿದ್ದಾರೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಕಳೆದ ಎರಡು ದಿವಸಗಳಿಂದ ಏನೋ ರಾಜ್ಯದಲ್ಲಿ ಒಂದು ದೊಡ್ಡ ಆರೋಪದ ಹೊರೆಯನ್ನು ಹೊತ್ತಿರತಕ್ಕಂಥ ಸರ್ಕಾರದ ಬಗ್ಗೆ ಏನೋ ಹಲವಾರು ವಿಷಯಗಳನ್ನು ಸದಸ್ಯರು ಚರ್ಚೆ ಮಾಡಿದ್ದಾರೆ. ಅದಕ್ಕೆ ಉತ್ತರವನ್ನು ಕೊಡುವುದಕ್ಕೆ ನನಗೆ ತಾವು ಏನು ಸಮಯವನ್ನು ನಿಗದಿ ಮಾಡಿದ್ದೀರಿ. ಆ ಪ್ರಕಾರ ನಾನು ಉತ್ತರವನ್ನು ಕೊಡುತ್ತೇನೆ. ಅದಾದನಂತರ ಅವರಿಗೆ ವೈಯಕ್ತಿಕವಾದ ಅವರ ಹೇಳಿಕೆಯನ್ನು ಕೊಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡುವುದು ತಮಗೆ ಬಿಟ್ಟಂಥ ವಿಚಾರ. ಆದರೆ ಇಲ್ಲಿ ಪ್ರಮುಖವಾದ ವಿಚಾರದ ಬಗ್ಗೆ ರಾಜ್ಯದ ಜನತೆ ಮುಂದೆ ನಾನು ಈ ಸದನದ ಮುಖಾಂತರ ಏನು ಹೇಳಬೇಕಾಗಿದೆ, ಅದಕ್ಕೆ ತಾವು ನನಗೆ ಅವಕಾಶವನ್ನು ಕೊಡಿ. ಅದರ ನಂತರ ಅವರ ವಿಷಯದಲ್ಲಿ ತಾವೇನು ನಿರ್ಣಯ ಮಾಡುತ್ತೀರೋ ಅದು ತಮಗೆ ಬಿಟ್ಟಂಥ ವಿಚಾರವಾಗಿದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರ ಕೊಡುವುದಕ್ಕೆ ಅಡ್ಡಬರತಕ್ಕಂಥ ಯಾವುದೇ ಉದ್ದೇಶ ನನಗಿಲ್ಲ. ನಾನು ಹೇಳಿಕೆ ಕೊಟ್ಟ ಮೇಲೆ ಸರ್ಕಾರ ಉತ್ತರ ಕೊಡುವುದಕ್ಕೆ ತೊಂದರೆಯೇನೂ ಇಲ್ಲ. ಅಥವಾ ಅದರಿಂದ ರಾಜ್ಯದಲ್ಲಿ ಬಹಳ ಹೆಚ್ಚು ಕಡಿಮೆ ಏನೂ ಆಗಿಬಿಡುವುದಿಲ್ಲ. ಈಗಾಗಿರತಕ್ಕಂಥ ಚರ್ಚೆ ಮೇಲೆಯೇ ಇನ್ನೊಂದು ಬೇರೆ ರೀತಿಯ ಪರಿಣಾಮ ಏನೂ ಆಗಿಬಿಡುವುದಿಲ್ಲ. ಸರ್ಕಾರದವರಿಗೆ ಎಷ್ಟು ಟೈಂ ಬೇಕೋ ಅಷ್ಟು ಟೈಂ ತೆಗೆದುಕೊಂಡು ಉತ್ತರ ಕೊಡಲಿ. ನಾನು ಕಳೆದ ಎರಡು ವರ್ಷ ಮೂರು ತಿಂಗಳಿನಿಂದ ಈ ಮನೆಯ ಸದಸ್ಯನಾಗಿದ್ದೇನೆ. ಆದರೆ ನಾನು ಸುಮಾರು ಎರಡು ವರ್ಷಗಳಿಗೂ ಹೆಚ್ಚು ಕಾಲ ಈ ಮನೆಯ ಸದಸ್ಯನಾಗಿರಬೇಕಾಗಿತ್ತು. ಆದರೆ ರಾಜಕೀಯ ಸ್ಥಿತ್ಯಂತರಗಳಿಂದ ಆದಂತಹ ಬೆಳವಣಿಗೆಗಳಿಂದ ಇವತ್ತು ಮನನೊಂದು ನಾನು ನನ್ನ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡಬೇಕೆಂದು ತೀರ್ಮಾನ ಮಾಡಿ ಸಲ್ಲಿಸುತ್ತಿದ್ದೇನೆ. ನಾನು ಏತಕ್ಕೋಸ್ಕರ ರಾಜೀನಾಮೆಯನ್ನು ಸಲ್ಲಿಸುತ್ತಿದ್ದೇನೆ? ನಾನು ಇಲ್ಲಿ ಎರಡು ವರ್ಷ ಎರಡು ತಿಂಗಳು ಸದಸ್ಯನಾಗಿದ್ದಂತಹ ಕಾಲದಲ್ಲಿ ಒಂದು ವರ್ಷ ಎರಡು

ತಿಂಗಳು ಮಂತ್ರಿಯಾಗಿದ್ದೇನೆ. ಎರಡು ಆಯವ್ಯಯಗಳನ್ನು ಮಂಡಿಸಿದ್ದೇನೆ. ಇಡೀ ಸದನದ ಎಲ್ಲಾ ಪಕ್ಷದ ಸದಸ್ಯರು ಕೂಡ ಕೋ-ಆಪರೇಷನ್ ಕೊಟ್ಟಿದ್ದಾರೆ. ಅವರಿಗೆ ಥ್ಯಾಂಕ್ಸ್ ಆದರೂ ಹೇಳಬೇಕಲ್ಲಾ ಹಾಗೂ ಅವರಿಗೆ ನಾನು ಏಕೆ ರಾಜೀನಾಮೆ ಕೊಡುತ್ತಿದ್ದೇನೆ ಎಂದು ಗೊತ್ತಾಗಬೇಕೆಲ್ಲಾ. ಸದಸ್ಯತ್ವಕ್ಕೆ ಏಕೆ ರಾಜೀನಾಮೆ ಕೊಡುತ್ತಿದ್ದೇನೆ ಎಂದು ನನ್ನನ್ನು ಆಯ್ಕೆ ಮಾಡಿರತಕ್ಕಂಥ ಮತದಾರರು ಐದು ವರ್ಷಕ್ಕೆ ನನ್ನನ್ನು ಆಶೀರ್ವಾದ ಮಾಡಿ ಕಳುಹಿಸಿದ್ದರು. ಐದು ವರ್ಷಕ್ಕೆ ಆಯ್ಕೆ ಮಾಡಿ ಕಳುಹಿಸಿದ್ದರೂ ಕೂಡ ನಾನು ಅವರಿಗೆ ಕೂಡ ಯಾವ ಕಾರಣಕ್ಕಾಗಿ ರಾಜೀನಾಮೆ ಕೊಡುತ್ತಿದ್ದೇನೆ ಎಂದು ತಿಳಿಸಬೇಕಾಗಿದೆ. ಯಾವ ಸದನದಲ್ಲಿ ಅವರ ಸಮಸ್ಯೆಗಳನ್ನು ಇಲ್ಲಿ ಎತ್ತುವುದಕ್ಕೆ, ಅವರ ಬಗ್ಗೆ ಹೋರಾಟ ಮಾಡುವುದಕ್ಕೆ, ಈ ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕೋಸ್ಕರ ಹಾಗೂ ಈ ರಾಜ್ಯದ ಅಭಿವೃದ್ಧಿಯ ಕೆಲಸ ಮಾಡುವುದಕ್ಕೆ ಕಳುಹಿಸಿದ್ದರು ಅದನ್ನು ಇವತ್ತು ಬಿಟ್ಟು ಮಧ್ಯದಲ್ಲಿ ರಾಜೀನಾಮೆ ಕೊಟ್ಟು ಮತ್ತೆ ಚುನಾವಣೆಗೆ ಹೋಗುತ್ತಿರುವುದರಿಂದ ನಾನು ಅದಕ್ಕೆ ಸಂಬಂಧಪಟ್ಟಂತಹ ಕಾರಣಗಳನ್ನು ಕೊಡಲೇಬೇಕಾಗುತ್ತದೆ. ಅದಕ್ಕೆ ರಾಜಕೀಯ ಪರಿಸ್ಥಿತಿಯ ಬೆಳವಣಿಗೆ ಹೇಳಬೇಕಾಗುತ್ತದೆ. ಅದಕ್ಕೋಸ್ಕರವಾಗಿ ನೀವು ಅವಕಾಶ ಮಾಡಬೇಕಾಗುತ್ತದೆ. ನಾನು ಇದನ್ನು ಹೇಳದೇ ಹೋದರೆ ಜನರನ್ನು ಕತ್ತಲೆಯಲ್ಲಿ ನಾನು ಇಟ್ಟಹಾಗೆ ಆಗುತ್ತದೆ. ನನ್ನ ಉದ್ದೇಶ, ಕಾರಣಗಳು, ಅದಕ್ಕೆ ಸಕಾರಣಗಳು ಇದೆಯೋ ಇಲ್ಲವೋ, ನಾನು ರಾಜೀನಾಮೆ ಕೊಡಬೇಕಾದಂತಹ ಅನಿವಾರ್ಯತೆ ಇದೆಯೋ ಇಲ್ಲವೋ ಎನ್ನವ ವಿಚಾರ ಜನರಿಗೆ ಗೊತ್ತಾಗಬೇಕಾಗುತ್ತದೆ. ಆ ಕಾರಣದಿಂದ ನಿಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ನಾನು ಇಡೀ ಸದನದ ಕಾಲವನ್ನು ತೆಗೆದುಕೊಂಡು ಮಾತನಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ಗಂಟೆಗಟ್ಟಲೆ ಭಾಷಣ ಮಾಡುವುದಿಲ್ಲ. ಕೇವಲ ನೈಸ್ ಕಂಪನಿ ಬಗ್ಗೆ ಎಂಟು ದಿನ ಚರ್ಚೆಯಾಯಿತು. ಅದರಿಂದ ದೊಡ್ಡ ಪರಿಣಾಮ ಏನಾಯಿತು? ನಾನಜ ಇವತ್ತು ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತಿದ್ದೇನೆ. ನಾನು ಈ ಸದನದ ಸದಸ್ಯನಾಗಿದ್ದೇನೆ, ನಾನೂ ಕೂಡ ನಾಲ್ಕು ಬಾರಿ ಈ ಸದನಕ್ಕೆ ಗೆದ್ದು ಬಂದಿದ್ದೇನೆ. ನನಗೆ ಹೇಳಿಕೆ ಕೊಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ಆದುದರಿಂದ ದಯಮಾಡಿ ತಮ್ಮ ಮನಸ್ಸನ್ನು ಬದಲಾವಣೆ ಮಾಡಬೇಕು. ನನಗೆ ಹೇಳಿಕೆ ಕೊಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು : ಸಿದ್ದರಾಮಯ್ಯನವರೆ, ಈಗ ಒಂದು ಲೆಟರ್ ಕಳುಹಿಸಿದ್ದೀರಿ. ನಾನು ತಾವು ಎತ್ತಿದ ತಕ್ಷಣ ನಮ್ಮ ಬೆಸಿನೆಸ್ ರೂಲ್ಸ್‌ನಲ್ಲಿ ಏನಿದೆ 202ರ ಪ್ರಕಾರ ನಿಯಮಾವಳಿಗಳಲ್ಲಿ ಇದಕ್ಕೆ ಅವಕಾಶ ಇಲ್ಲವೆಂದು ಹೇಳಿದ್ದೇನೆ. ಆಮೇಲೆ ಏನು ವೈಯಕ್ತಿಕ ವಿವರಣೆಗಳನ್ನು ಹೇಳಿದ್ದೀರಿ. ಅದು ಬೇರೆ ಡಿಫರೆಂಟ್ ಕಂಟೆಸ್ಟ್‌ನಲ್ಲಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದು ನಿಮಿಷ, ಸ್ಪಷ್ಟ ಇದೆ.

"A member may, with the permission of the Speaker, make a personal explanation although there is no question before

the House, but in this case no debatable matter may be brought forward, and no debate shall arise.

ಇದು ಡಿಬೇಟ್ ಏನಿಲ್ಲ. Only personal explanation, with the permission of the Speaker.

ಅಧ್ಯಕ್ಷರು : ಪರ್ಸನಲ್ ಎಕ್ಸ್‌ಪ್ಲನೇಷನ್ ಯಾವ ಕಂಟೆಸ್ಟ್‌ನಲ್ಲಿ ಎನ್ನುವುದನ್ನು we have to see ಆದ್ದರಿಂದ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, This provision is made under such circumstance only and this can be used under such circumstances only. ಇಂತಹ ಸರ್ಕಮೆಟೆನ್ಸಸ್‌ಗೋಸ್ಕರವೇ ಇಂತಹ ರೂಲ್ಸ್ ಅನ್ನು ಮಾಡಿದ್ದು. ಅದರ ಅವಕಾಶವನ್ನು ಕೊಡಲಿಲ್ಲವೆಂದರೆ ಹೇಗೆ? ಇದು ಡಿಬೇಟ್ ಇಲ್ಲ, ಎಕ್ಸ್‌ಪ್ಲನೇಷನ್ ಇಲ್ಲ, ಕ್ವೆಶ್ಚನ್ ಆನ್ಸರ್ ಇಲ್ಲ ಏನೂ ಇಲ್ಲ. ಕೇವಲ ಥ್ಯಾಂಕ್ಸ್ ಹೇಳತಕ್ಕಂಥಾದ್ದು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇಂತಹ ಸನ್ನಿವೇಶ ನಿರ್ಮಾಣವಾಗಬಹುದು ಇಂತಹ ಸನ್ನಿವೇಶ ಬರಬಹುದು ಎಂದು ಊಹಿಸಿ ನಿಯಮ 332ರಲ್ಲಿ ಸೇರಿಸಿದ್ದಾರೆ.

ಅಧ್ಯಕ್ಷರು : 332 ಅದು ಯಾವ ಕಂಟೆಸ್ಟ್‌ನಲ್ಲಿ ಎಂದು.

SRI SIDDARAMAIAH : This is very, very clear. With the permission of the Chair.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಅದರ ವಿಚಾರದಲ್ಲಿ, ತಾವು ಸ್ವಲ್ಪ ದಯಮಾಡಿ....

ಶ್ರೀ ಸಿದ್ದರಾಮಯ್ಯ : ಸಂಸದೀಯ ಸಚಿವರೇ, ತಮಗೆ ಹೇಳುವುದಕ್ಕೆ ಅವಕಾಶ ಇದೆ.

ಶ್ರೀ ಎಂ.ಪಿ. ಪ್ರಕಾಶ್ : ಆಯಿತು ತಾವು ಹೇಳಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, "A member may, with the permission of the Speaker, make a personal explanation...." ನಾನು ಪರ್ಸನಲ್ ಎಕ್ಸ್‌ಪ್ಲನೇಷನ್ನೇ ಮಾಡುತ್ತಿರುವುದು. "..... although there is no question before the House,....." very, very clear. ".....but in this case no debatable matter, matter may be brought forward, and no debate shall arise." ಎಂದು ಹೇಳಿದ್ದಾರೆ. ನಾನು ಆ ತರಹ ಬಹಳ ಕಾಂಟ್ರವರ್ಸಿ ಡಿಬೇಟೆಬಲ್ ಸ್ಟೇಟ್‌ಮೆಂಟ್ ಮಾಡುವುದಿಲ್ಲ. Only personal explanation, I am going to give, Please permit me.

SRI M. MALLIKARJUNA KHARGE : Even otherwise, you can suspend also.

SRI SIDDARAMAIAH : You can suspend also. The chair has got all the powers. Chair has got all the powers to suspend any rule or any provision. This House has made all these provisions. You have got all the powers. You have got inherent powers, power. Please exercise your inherent power.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಯಾವಾಗ ಈ 332 ಬರುತ್ತದೆ ಎನ್ನುವ ಪ್ರಶ್ನೆ ಇದೆ. ಇದು ಸುಮ್ಮನೆ ಸೇರಿಸಿರತಕ್ಕಂಥದ್ದಲ್ಲ. ವೈಯಕ್ತಿಕ ವಿವರಣೆಗಳು ಎಂದು ಹೇಳುವಾಗ, ವೈಯಕ್ತಿಕವಾದಂತಹ ಆಪಾದನೆಗಳನ್ನು ಮಾಡಿದಂತಹ ಸಂದರ್ಭದಲ್ಲಿ ಆ ವಿಷಯ ಚರ್ಚೆಗೆ ಅವಕಾಶ ಇಲ್ಲದಂತಹ ಸಂದರ್ಭ ಬಂದಾಗ ಕೂಡ ಆತ ಅಧ್ಯಕ್ಷರ ಅನುಮತಿಯನ್ನು ಪಡೆದುಕೊಂಡು ವಿವರಣೆಯನ್ನು ಕೊಡಬಹುದು ಎಂದಿದೆ. In Shakdher & Kaul, it is said:

> "Members against whom, comments or criticism of a personal nature are made on the floor of the House, are entitled to make with the consent of the Speaker, personal explanation in their defence although there is no question before the House. If there are any allegations made against or any personal explanation is absolutely necessary to safeguard himself, then even if it is not within the Agenda, with the permission of the Speaker, he can make a personal explanation.

Not on a mere, ಯಾವುದೇ ವಿಷಯಕ್ಕೆ,

> "A member has a right to make a personal explanation notwithstanding the fact that the allegations made against him in the House do not relate to him in his capacity as a Member of the Parliament, but otherwise. The forum of the House should not, however, be used to make a personal explanation to contradict or clarify report not connected with the proceedings of the House but published in the press...."

It is said in Shakdher and Kaul. 332ರ ಉದ್ದೇಶ ಕೂಡ ಯಾವುದಾದರೂ ಟೀಕೆ ಟಿಪ್ಪಣಿ, ಚಾರಿತ್ರ್ಯವಧೆ ಮಾಡುವಂತಹ ವಿಷಯಗಳು ಏನಾದರೂ ಬಂದಂತಹ ಸಂದರ್ಭದಲ್ಲಿ

ಅದು ಅವತ್ತಿನ ದೈನಂದಿನ ಕಾರ್ಯಕಲಾಪಗಳಲ್ಲಿ ಇಲ್ಲದೆ ಹೋದರೂ ಕೂಡ ಈ 332ರ ಕೆಳಗೆ ಅವರು ತಮ್ಮ ವೈಯಕ್ತಿಕವಾದಂತಹ ವಿವರಣೆಗಳನ್ನು ತಮ್ಮ ಸಂಬಂಧಪಟ್ಟ ಆರೋಪಗಳ ಮೇಲೆ ಮಾಡಬಹುದು. ಆದರೆ ಇಲ್ಲಿ ತಾವು ಹೇಳಿದಂತೆ ಎರಡೇ ಸೆಂಟೆನ್ಸೆಸ್ ಫಾರ್ಮೆಟ್ ಅನ್ನು ಕೊಟ್ಟಿದ್ದಾರೆ. ಅದು ನಾನು ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡುತ್ತೇವೆ ಎನ್ನುವಂತಹ ಫಾರ್ಮೆಟ್ ಕೊಟ್ಟಿದ್ದಾರೆ. ಆ ಸಂದರ್ಭದಲ್ಲಿ ಅದನ್ನು ಓದಬಾರದು ಎಂದೂ ಕೂಡ ನಿರ್ಣಯ ಇದೆ. ಆ ಕಾರಣಕ್ಕಾಗಿ ತಾವು ಈ ವಿಚಾರದಲ್ಲಿ ಅವರ ರಾಜೀನಾಮೆ ಪತ್ರವನ್ನು ಸ್ವೀಕರಿಸುವುದು ಬಿಡುವುದು ತಮಗೆ ಬಿಟ್ಟಿರತಕ್ಕಂಥಾದ್ದು. ಮತ್ತು ಆ ವಿಷಯದಲ್ಲಿ ವೈಯಕ್ತಿಕವಾದ ವಿವರಣೆಯನ್ನು ಕೊಡುವುದಕ್ಕೆ ಸಭಾ ನಿಯಮಾವಳಿಗಳಲ್ಲಿ ಆಗಲಿ, ಸಂಪ್ರದಾಯದಲ್ಲಾಗಲಿ, ಶಕ್ದರ್ ಅಂಡ್ ಕೌಲ್‌ನಲ್ಲಿ ಕೊಟ್ಟಿರುವಂತಹ ವಿವರಣೆ ಹಿನ್ನೆಲೆಯಲ್ಲಿ, ಪಾರ್ಲಿಮೆಂಟ್‌ನಲ್ಲಿ ಆದಂತಹ ಚರ್ಚೆಯ ಹಿನ್ನೆಲೆಯಲ್ಲಿ 332 ಏನಿದೆ ಅದು ಇದಕ್ಕೆ ಅನ್ವಯವಾಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, 202 ಏನಿದೆಯಲ್ಲಾ, it is just a procedure, ಒಬ್ಬ ಮೆಂಬರ್ ರಾಜೀನಾಮೆ ಕೊಡಬೇಕು ಎಂದಾಗ ಅದರ ಫಾರ್ಮೆಟ್ ಯಾವ ರೀತಿ ಇರಬೇಕು ಎನ್ನುವ ಸಲುವಾಗಿ ಇದೆ.

> "202(1) A member who desires to resign his seat in the House shall intimate in writing under his hand addressed to the Speaker, his intention to resign his seat in the House in the following form and shall not give any reason for his resignation."

ಎಂದರೆ, ಆ ಫಾರ್ಮೆಟ್‌ನಲ್ಲಿ ಯಾವುದೂ ಕಾರಣವನ್ನೂ ಕೊಡದೆ ಕ್ಲಾರಿಟಿ ಇರಬೇಕು. ಅಷ್ಟೇ 202ರಲ್ಲಿ ಇದೆ.

ಅಧ್ಯಕ್ಷರು : ಅದರಲ್ಲಿ ಮುಂದೆ ನೋಡಿ ಒಂದು ಸಮಯ ಏನಾದರೂ ಬರೆದಿದ್ದರೆ ಅದನ್ನೆಲ್ಲಾ ತೆಗೆದುಹಾಕಬೇಕು. ಸ್ಪೀಕರ್ ಸಭೆಗೆ ತಿಳಿಸುವಾಗ ಅದನ್ಯಾವುದನ್ನೂ ತಿಳಿಸಬಾರದು ಎಂದು ಇದೆಯಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಹಾಗಲ್ಲ, ಅವರು ರಾಜೀನಾಮೆಯನ್ನು ಲಿಖಿತವಾಗಿ ಕೊಡಬೇಕು. ಅದರಲ್ಲಿ ಯಾವುದೇ ಸ್ಪಷ್ಟೀಕರಣ, ಯಾವುದೇ ಕಾರಣಗಳು ಇರಬಾರದು ಎನ್ನುವುದು, it is only the procedure. This procedure does not apply to the House. It is in your chamber. Rule 202 is a deliberation between the Member and you correspondent deliberation. It is not a matter of the House. ಆದರೆ 332ರ ಬಗ್ಗೆ ಮಾನ್ಯ ಪ್ರಕಾಶ್‌ರವರು ಏನು ಹೇಳಿದರೆಂದರೆ ಇದು ಅಲಿಗೇಷನ್ ಆದರೆ ಮತ್ತೊಂದು ಅಲೀಜ್ ಆದರೆ ಆಗ ಹೇಳಬಹುದು. No, Sir.

"A member may, with the permission of the Speaker, make a personal explanation although there is no question before the House,...."

ನೋ ಕ್ವೆಶ್ಚನ್ ಎಂದರೆ ಅಜೆಂಡಾ ಅಲ್ಲ. There is no necessity that it should be in the agenda. ನಮ್ಮ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್‌ಗೆ ಹೇಳಬೇಕಾದರೆ ಯಾರು ಇವರ ಮೇಲೆ ಅಲಿಗೇಷನ್ ಮಾಡಬೇಕು ಎಂದು. ನೋ, ಅಜೆಂಡಾ ಇರಬೇಕೆಂದು ಇಲ್ಲ. ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಆದರೆ ಮೆಂಬರ್ ಇವತ್ತು ತನ್ನ ರಾಜೀನಾಮೆ ಬಗ್ಗೆ ಸ್ಪಷ್ಟೀಕರಣ ಹೇಳುತ್ತೇನೆ ಎಂದಾಗ ನಮಗೆ ಬೇಜಾರಾಗುವುದು ಏನಿದೆ? ಒಬ್ಬ ಹಿರಿಯ ಸದಸ್ಯರು ಯಾವ ರೀತಿ ನಾಡಿನ ಬಗ್ಗೆ ನಿಷ್ಠೆಯಿಂದ ಬಹಳ ಪ್ರಮಾಣಿಕವಾಗಿ ಸೇವೆ ಮಾಡಿದ್ದಾರೆ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು, ನಾವೆಲ್ಲಾ ಮೆಚ್ಚಿದ್ದೇವೆ. ಅವರು ಇವತ್ತು ಈ ಸದನದಿಂದ ಹೋಗುತ್ತಾರೆ ಎಂದರೆ ನಮಗೆ ನೋವು. ಇಂತಹ ಒಬ್ಬ ಗೌರವಾನ್ವಿತ ಸದಸ್ಯರು, ಇವತ್ತು ಸದನದಿಂದ ಹೋಗುತ್ತಾರೆಂದರೆ ನಮಗೂ ನೋವು ಇದೆ. ಆ ಸಂದರ್ಭದಲ್ಲಿ, ಅವರು ನಾನು ಏಕೆ ರಾಜೀನಾಮೆಯನ್ನು ಕೊಡುತ್ತೇವೆಂಬುದನ್ನು ಹೇಳಿದರೆ, ಇದರ ಬಗ್ಗೆ ಯಾರೂ ವಿರೋಧ ಮಾಡುವ ಪ್ರಶ್ನೆ ಬರುವುದಿಲ್ಲ. ಮತ್ತೆ ನಿಯಮ 202 ಮತ್ತು 332ರಲ್ಲಿ ಬಹಳ ಕ್ಲಿಯರ್ ಆಗಿ ಇದೆ. ಬಹಳ ಕ್ಲಾರಿಟಿ ಇದೆ. ತಾವು ಅವರಿಗೆ ಅವಕಾಶವನ್ನು ಕೊಡಬೇಕೆಂದು ಒತ್ತಾಯಿಸುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಅವರು ವೈಯಕ್ತಿಕ ವಿವರಣೆಯನ್ನು ಕೊಡಬೇಕಾಗಿರತಕ್ಕಂಥಾದ್ದಕ್ಕೆ ನಿಯಮ 332ರ ಕೆಳಗೆ, ತಾವು ಏನು ವಿವರಣೆಯನ್ನು ಕೊಡುತ್ತಿದ್ದೀರಿ, ಯಾವ ಸಂದರ್ಭಗಳಲ್ಲಿ ವೈಯಕ್ತಿಕ ವಿವರಣೆಯನ್ನು ಕೊಡಬಹುದೆಂಬ ಬಗ್ಗೆ Shakdher & Kaul ನವರು ಅನೇಕ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ಎಲ್ಲರೂ ನನ್ನ ವೈಯಕ್ತಿಕವಾದ ವಿವರಣೆ ಎಂದು ಹೇಳಿ. ಅವರಿಗೆ ಈಗ ಒಂದು ಸಂದರ್ಭ ಇದೆ. ರಾಜೀನಾಮೆಯನ್ನು ಕೊಡತಕ್ಕಂಥಾದ್ದು. ಈ ರಾಜೀನಾಮೆ ವಿಚಾರದಲ್ಲಿ ವೈಯಕ್ತಿಕ ವಿವರಣೆಯನ್ನು ಕೊಡಬಹುದೆಂದು ತಾವು ಪರಿಭಾವಿಸಿದ್ದೀರಿ. ಆದರೆ ನಿಯಮ 332, it is governed by some of the rulings given in the Parliament. Under what circumstances, such a provision has been incorporated in our rules of procedure. That incorporated procedure, ಮತ್ತು ಅದರ ಆಚೆಗೆ ಇರುವಂಥಾದ್ದು. Members against whom comments or criticism of a personal nature are made on the floor of the House, are entitled to make, with the consent of the Speaker, personal explanation in their defence although there is no question before the House. If there is any personal allegations are made or otherwise..

ಇವತ್ತೊ, ನಿನ್ನೆಯೊ, ನಾಳೆಯೋ, ಯಾವತ್ತೋ ಒಂದು ಸಂದರ್ಭದಲ್ಲಿ ಮಾಡಿದರೆ ಅದಕ್ಕೆ ಅವರು ವಿವರಗಳನ್ನು ಕೊಡುವುದಕ್ಕೆ ಸಂಪೂರ್ಣವಾದ ಹಕ್ಕು ಇದೆ. ಆದರೆ ಇಲ್ಲಿ ಬರುವಂಥಾದ್ದು, ಅವರು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಅವರು ಯಾವ ಕಾರಣಕ್ಕಾಗಿ ರಾಜೀನಾಮೆಯನ್ನು ಕೊಟ್ಟಿದ್ದೇನೆಂಬ ವಿಷಯವನ್ನು ನಾನು ತಿಳಿಸಬೇಕಾಗಿದೆಯೆಂದು, ಅವರು ಕೇಳುವಂಥಾದ್ದು. ಆ ರೀತಿಯಲ್ಲಿ ನೋಡುವುದಾದರೆ, ಅವರು ರಾಜೀನಾಮೆಯನ್ನು ಕೊಡಬಾರದೆಂದು ಬಯಸುವವರಲ್ಲಿ ನಾವೂ ಒಬ್ಬರು. ಆದರೆ ಅದು ರಾಜಕೀಯ ಸ್ಥಿತ್ಯಂತರದ ಸಂದರ್ಭಗಳಲ್ಲಿ ಅವರು ಆ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ನಾವು ಬೇರೆ ಕಡೆಗೆ ಕುಳಿತುಕೊಂಡಿದ್ದೇವೆ. ಅವರು ಬೇರೆ ಕಡೆಗೆ ಕುಳಿತುಕೊಂಡು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ನಾನು ಆ ಬಗ್ಗೆ ಚರ್ಚೆ ಮಾಡುವುದಿಲ್ಲ. ಅವರು ವೈಯಕ್ತಿಕವಾಗಿ ರಾಜೀನಾಮೆಯನ್ನು ಕೊಡಬಾರದಾಗಿತ್ತು ಎನ್ನುವವರಲ್ಲಿ ನಾನು ಒಬ್ಬನು ಆಗಿದ್ದೇನೆ. ಆದರೆ ಇಲ್ಲಿ ಬಂದಿರುವಂತಹ ಪ್ರಶ್ನೆ, ಈ ನಿಯಮಾವಳಿಗಳನ್ನು ನಾವೇ ರಚನೆ ಮಾಡಿಕೊಂಡಿದ್ದೇವೆ. ಅದು ಯಾವ ಉದ್ದೇಶಕ್ಕಾಗಿ? ಸದನದ ಯಾರೇ ಸದಸ್ಯರು ಸದನದಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಬಯಸಿದರೆ, ಅಧ್ಯಕ್ಷರನ್ನು ಸಂಭೋಧಿಸಿ ತಾವು ಬರೆದ, ಸಹಿ ಮಾಡಿದ ಪತ್ರದಲ್ಲಿ ಸದನದಲ್ಲಿನ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವ ತಮ್ಮ ಇಚ್ಛೆಯನ್ನು ಕೆಳಕಂಡ ಪತ್ರದಲ್ಲಿ ತಿಳಿಸತಕ್ಕದ್ದು ಹಾಗೂ ಅದರಲ್ಲಿ ತಮ್ಮ ರಾಜೀನಾಮೆಗೆ ಯಾವುದೇ ಕಾರಣವನ್ನು ನೀಡತಕ್ಕದ್ದು ಅಲ್ಲ. ಅಧ್ಯಕ್ಷರು, ವಿಧಾನಸಭೆ, ಬೆಂಗಳೂರು... ಮಾನ್ಯರೆ, ... ಅಂದರೆ ದಿನಾಂಕದಿಂದ ಸಭೆಯಲ್ಲಿ ನನ್ನ ಸದಸ್ಯತ್ವದ ಸ್ಥಾನಕ್ಕೆ ರಾಜೀನಾಮೆಯನ್ನು ನೀಡುತ್ತಿದ್ದೇನೆ. ತಮ್ಮ ವಿಶ್ವಾಸಿ, ಸದಸ್ಯರು, ಸ್ಥಳ, ದಿವಸ, ...

ಶ್ರೀ ಆರ್.ವಿ. ದೇಶಪಾಂಡೆ : ಅದು ಫಾರ್ಮೆಟ್.... It is not a subject in the House to be discussed.

ಶ್ರೀ ಎಂ.ಪಿ. ಪ್ರಕಾಶ್ : ಆಯಿತು, ಫಾರ್ಮೆಟ್‌ಗೆ ಪ್ರೊಸೀಜರ್, ತಾವು ಇದನ್ನು ಕೇಳಿ, ಪರಂತು, ಯಾರೇ ಸದಸ್ಯರು, ರಾಜೀನಾಮೆ ಪತ್ರದಲ್ಲಿ ಯಾವುದೇ ಕಾರಣವನ್ನು ಅಥವಾ ಸಂಬಂಧಪಡದ ವಿಷಯವನ್ನು ಕೊಟ್ಟಿದ್ದರೆ, ಅಧ್ಯಕ್ಷರು, ತಮ್ಮ ವಿವೇಚನೆಗೆ ಅನುಸಾರ, ಅಂತಹ ಪದಗಳನ್ನು, ವಾಕ್ಯಗಳನ್ನು, ಅಥವಾ ವಿಷಯವನ್ನು ಬಿಟ್ಟು ಬಿಡತಕ್ಕದ್ದು. ಹಾಗೂ ಸದನದಲ್ಲಿ ಅದನ್ನು ಓದತಕ್ಕದ್ದಲ್ಲ. ಆದುದರಿಂದ ಎಕ್ಸ್‌ಪ್ಲನೇಷನ್ ಕೊಡಬೇಕೆಂದು ಹೇಳಿ.....

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ತಾವು ಹೇಳುವಂಥಾದ್ದನ್ನೆಲ್ಲಾ ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ಒಂದು ಪ್ರೊಸೀಜರ್ ಮಾಡಿದ್ದಾರೆ, ಒಬ್ಬ ಸದಸ್ಯರು ರಾಜೀನಾಮೆಯನ್ನು ಕೊಡಬೇಕಾದರೆ, ಯಾವ ಪ್ರೊಸೀಜರ್ ಅನ್ನು ಅಳವಡಿಸಿಕೊಳ್ಳಬೇಕು. ಸ್ಪೀಕರ್‌ಗೆ ಕೊಡುವುದಕ್ಕೆ ಹೇಳುತ್ತಾರೆ. ಅವರಿಗೆ ಕೊಡುವಾಗ ಯಾವುದೇ ಕಾರಣವನ್ನು ಅಲ್ಲಿ ಉಲ್ಲೇಖ ಮಾಡಬಾರದು, ನಮೂದಿಸಬಾರದು, ಮತ್ತೆ ಬೇರೆ ಇನ್ನು ಏನೂ ಹೇಳಬಾರದು ಎಂದು ಹೇಳಿದ್ದಾರೆ. ಅದು

ಬಿಟ್ಟರೆ, ಒಂದು ವೇಳೆ ಏನಾದರೂ ಆ ಫಾರ್ಮೆಟ್‌ನಲ್ಲಿ ಹೇಳಿರುವುದನ್ನು ಬಿಟ್ಟು ಬೇರೆ ಏನಾದರೂ ಬರದಿದ್ದರೆ, ನಿಯಮ 202ಗೆ ಸೀಮಿತವಲ್ಲದೇ, ಬೇರೆ ಏನಾದರೂ ವಿಷಯಗಳು ಅಲ್ಲಿ ಸೇರಿದ್ದರೆ, ಅದನ್ನು ಅಧ್ಯಕ್ಷರು ತೆಗೆದು ಹಾಕುವುದಕ್ಕೆ, ಹೊಡೆದು ಹಾಕುವುದಕ್ಕೆ, ಅಧಿಕಾರ ಇದೆ. ಇಲ್ಲಿ ಪ್ರಶ್ನೆ ಇರುವಂಥಾದ್ದು, ನಾನು ರಾಜೀನಾಮೆಯ ಪತ್ರದಲ್ಲಿ ಕಾರಣಗಳನ್ನು ಸೇರಿಸಿದ್ದೇನೆ. ಕಾರಣಗಳನ್ನು ಕೊಟ್ಟಿದ್ದೇನೆ. ಅದಕ್ಕೆ ಹಿನ್ನಲೆ ಏನು? ಯಾವ ಕಾರಣಕ್ಕಾಗಿ ಕೊಟ್ಟಿದ್ದೇನೆ ಎಂದು ನಾನು ಏನೂ ಬರೆಯುತ್ತಾ ಇಲ್ಲ. ನಾನು ಫಾರ್ಮೆಟ್‌ನಲ್ಲಿ ಇರುವ ಹಾಗೆ ಬರೆದು ಇಟ್ಟುಕೊಂಡಿದ್ದೇನೆ. ಒಂದು ವೇಳೆ ಅದಕ್ಕಿಂತ ಹೆಚ್ಚಿಗೆ ಇದ್ದರೆ, ಫಾರ್ಮೆಟ್‌ಗಿಂತ ಜಾಸ್ತಿ ಇದ್ದರೆ, you have got right to remove it or strike it down. ತಾವು ಅಷ್ಟು ತೆಗೆಯಬಹುದು, ಆ ರೀತಿಯೆಲ್ಲಾ ಇದೆ. ಆ ಕಾರಣದಿಂದ ನಾನು ವೈಯಕ್ತಿಕವಾಗಿ, ಏಕೆ ರಾಜೀನಾಮೆಯನ್ನು ಕೊಡುತ್ತಿದ್ದೇನೆಂಬುದನ್ನು ಸದನದಲ್ಲಿ ಹೇಳುವುದಕ್ಕೆ ಅವಕಾಶ ಇಲ್ಲವೆಂದರೆ ಹೇಗೆ? This is a curtailment of my right. ಆ ರೀತಿ ಮಾಡುವುದಕ್ಕೆ ಬರುವುದಿಲ್ಲ. ನಮ್ಮ ಹಕ್ಕನ್ನು ಚಲಾವಣೆ ಮಾಡುತ್ತೇವೆ. ನಾನು ಇಲ್ಲಿ ಒಂದು ಹೇಳಿಕೆಯನ್ನು ಕೊಡುತ್ತೇನೆಂದರೆ, ಇದರಿಂದ ಆಗುವಂತಹ ಅನಾಹುತ ಏನೂ ಆಗುವುದಿಲ್ಲ ಅಥವಾ ನಾನು ಇಲ್ಲಿ ಯಾರ ಮೇಲೂ ಆರೋಪ ಮಾಡುವುದಕ್ಕೆ ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಬಂದು ಇಲ್ಲಿ ನಿಂತಿಲ್ಲ. ಸರ್ಕಾರದ ಮೇಲೆ ಆರೋಪ ಮಾಡುತ್ತೇನೆ. ಅದಕ್ಕೋಸ್ಕರ ನನಗೆ ಅವಕಾಶವನ್ನು ಕೊಡಿ ಎಂದು ನಾನು ನಿಂತಿಲ್ಲ. ನಾನು ಏಕೆ ರಾಜೀನಾಮೆಯನ್ನು ಕೊಡುತ್ತಿದ್ದೆನೆಂಬುದನ್ನು ಹೇಳುವುದಕ್ಕೆ ಮಾತ್ರ, personal explanation ಮಾಡುವುದಕ್ಕೆ ಮಾತ್ರ ನಾನು ಕೇಳುತ್ತಿದ್ದೇನೆಯೇ ಹೊರತು, ಇದು ಡಿಬೇಟ್ ಮಾಡುವುದಕ್ಕೋಸ್ಕರ ಅಲ್ಲ. ಇದು ಡಿಬೇಟ್ ಆಗಬೇಕಾದಂತಹ ವಿಚಾರವೂ ಅಲ್ಲ, ವಸ್ತುವೂ ಅಲ್ಲ. ಆದುದರಿಂದ ತಾವು ಇದರ ಜೊತೆಗೆ ನಿಯಮ 332ರಲ್ಲಿ ಕೂಡ ಸ್ಪಷ್ಟವಾಗಿ ಹೇಳಿದ್ದಾರೆ. ಯಾವುದೇ ಸದಸ್ಯರು ಅವರ ವೈಯಕ್ತಿಕ ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಅವಕಾಶ ಇದೆ. ಅದಕ್ಕೆ ಸ್ಪೀಕರ್ ಪರ್ಮಿಟ್ ಮಾಡಬಹುದೆಂದು ಇದೆ. ಅದನ್ನು ಚರ್ಚೆ ಮಾಡಬಾರದೆಂಬುದು ಬೇರೆ ವಿಚಾರ. ಅಜೆಂಡಾದಲ್ಲಿ ಇಲ್ಲದೇ ಇರುವುದನ್ನು ಮಾಡಬಹುದೆಂದು ಎಲ್ಲಾ ಇದೆ. ನಿಮಗೆ ಕೊಡುವುದಕ್ಕೆ ಅವಕಾಶ ಇದೆ. ನಿಮಗೆ ಆ ಅಧಿಕಾರ ಇದೆ. You have got inherent power, ಇದೆ. ಸ್ಪೆಸಿಫಿಕ್ ಪ್ರಾವಿಜನ್ ಇರಬೇಕೆಂದು ಏನೂ ಇಲ್ಲ. ಯಾವುದೇ ನಮ್ಮ ನಿಯಮಾವಳಿಗಳಲ್ಲಿ ಸ್ಪೆಸಿಫಿಕ್ ಪ್ರಾವಿಜನ್ ಇರಲೇಬೇಕೆಂದು ಏನೂ ಇಲ್ಲ. ಇಲ್ಲದೇ ಹೋದರೂ ಕೂಡ ಅವಕಾಶವನ್ನು ಮಾಡಿಕೊಡುವುದಕ್ಕೆ ನಿಮಗೆ ಅಧಿಕಾರ ಇದೆ. ಒಂದು ವೇಳೆ ಯಾವುದೇ ನಿಯಮಾವಳಿ ಅಡ್ಡ ಬಂದರೆ, ಆ ನಿಯಮಾವಳಿಯನ್ನು ಬದಿಗೊತ್ತಿ, ಅವಕಾಶವನ್ನು ಕೊಡುವುದಕ್ಕೆ ನಿಮಗೆ ಅಧಿಕಾರ ಇದೆ. ಇಂತಹ ಸನ್ನಿವೇಶದಲ್ಲಿ ನನಗೆ ಹೇಳಿಕೆ ಕೊಡುವುದಕ್ಕೆ, ಯಾವುದೇ ತೊಂದರೆಗಳು ಇಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಇಲ್ಲದೇ ಹೋದರೆ, ನನ್ನ ಹಕ್ಕಿಗೆ ಚ್ಯುತಿ ಬಂದ ಹಾಗೆ ಆಗುತ್ತದೆಂದು ನಾನು ಭಾವಿಸಿಕೊಳ್ಳಬೇಕಾಗುತ್ತದೆ.

ನನಗೆ ಅವಕಾಶ ಸಿಗಲಿಲ್ಲವೆಂಬುದು ನಾನು ರಾಜ್ಯದ ಜನತೆಗೆ ಇವತ್ತು ಹೇಳಬೇಕಾಗುತ್ತದೆ. ನನಗೆ ಇದನ್ನು ಹೇಳುವುದಕ್ಕೂ ಅವಕಾಶ ಸಿಗದೇ ಹೋಯಿತು, ಎಂದು ಹೇಳಬೇಕಾಗುತ್ತದೆ. ಆ ಕಾರಣದಿಂದ ದಯಮಾಡಿ, ನನಗೆ ಅವಕಾಶವನ್ನು ಕೊಡಬೇಕೆಂದು ಮತ್ತೊಮ್ಮೆ ನನ್ನ ಕಳಕಳಿಯ ವಿನಂತಿ ಆಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ತಾವು ತೀರ್ಪನ್ನು ಕೊಡುವುದಕ್ಕೆ ಮುಂಚೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ತಾವು ಈ ಸದನದಲ್ಲಿ ಮಂತ್ರಿಗಳಾಗಿ ಕೆಲಸವನ್ನು ಮಾಡಿರುವಂಥವರು. ನಾವೇ ರಚನೆ ಮಾಡಿಕೊಂಡಿರುವಂತಹ ನಡವಳಿಕೆ ಮತ್ತು ನಿಯಮಗಳ ಪ್ರಕಾರ ಪುಟ: 140 ನಿಯಮ 345ರಲ್ಲಿ ಮಂತ್ರಿಗಳ ಹೇಳಿಕೆ ಎನ್ನುವುದಕ್ಕೆ ಒಂದಕ್ಕೆ ಪ್ರಾವಿಜನ್ ಇದೆ. ವಿಧಾನ ಸಭಾಧ್ಯಕ್ಷರ ಅನುಮತಿ ಪಡೆದು ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಹೇಳಿಕೆ ನೀಡಬಹುದು, ಒಬ್ಬ ಮಂತ್ರಿಗಳು. ಅಂತಹ ಹೇಳಿಕೆಯ ಮೇಲೆ ಯಾವುದೇ ಚರ್ಚೆಗೆ ಅವಕಾಶವಿರತಕ್ಕುದಲ್ಲ. ಆದರೆ, ರಾಜ್ಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಪಡೆಯುವ ಉದ್ದೇಶಕ್ಕಾಗಿ ಪ್ರಶ್ನೆಗಳನ್ನು ಕೇಳಲು ಸದಸ್ಯರಿಗೆ ಅನುಮತಿ ನೀಡಬಹುದು ಎಂದು ಇದೆ. ಅಂದರೆ ಮಂತ್ರಿಗಳು ಯಾವುದಾದರೂ ಪಬ್ಲಿಕ್ ಇಂಪಾರ್ಟೆಂಟ್ಸ್ ಬಗ್ಗೆ, ಸಡನ್ ಆಗಿ ಎದ್ದು ನಿಂತುಕೊಂಡು, ತಮ್ಮ ಪರ್ಮಿಷನ್ ಅನ್ನು ತೆಗೆದುಕೊಂಡು ಒಂದು ಸ್ಟೇಟ್‌ಮೆಂಟ್ ಮಾಡಬಹುದೆಂಬ ಪ್ರಾವಿಜನ್ ಅನ್ನು, ಈ ನಿಯಮಾವಳಿ ಪುಸ್ತಕದಲ್ಲಿ ನಾವು ಮಾಡಿಕೊಂಡಿದ್ದೇವೆ. ಅದೇ ನಿಯಮ 332ರಲ್ಲಿ ಏಕೆ ನಾವು ಸಪರೇಟ್ ಆಗಿ ಮಾಡಿಕೊಂಡಿದ್ದೇವೆ. ಯಾವ ರೀತಿ ಮಂತ್ರಿಗಳಿಗೆ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಒಂದು ಅವಕಾಶ ಇದೆ. ಅದೇ ರೀತಿಯಲ್ಲಿ ಸದಸ್ಯರಿಗೂ ಸಹಿತ ತಮ್ಮ ಅನುಮತಿಯನ್ನು ಬೇಡಿ, ಅನುಮತಿ ಕೊಟ್ಟ ನಂತರ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆಯೆನ್ನುವುದಕ್ಕೋಸ್ಕರವೇ, ಈ ನಿಯಮ 332ರಲ್ಲಿ ನಿಯಮಾವಳಿಗಳನ್ನು ನಾವು ರಚನೆಯನ್ನು ಮಾಡಿಕೊಂಡಿರುವಂಥಾದ್ದು. ಇದರ ಜೊತೆಗೆ ಅವರು ಅವರ ವೈಯಕ್ತಿಕ ಹೇಳಿಕೆಯನ್ನು ಏನೂ ಕೊಡುತ್ತಿಲ್ಲ. ತಮಗೆ ಗೊತ್ತಿರುವ ಹಾಗೆ ಅನೇಕ ಪ್ರಿಸಿಡೆಂಟ್‌ಗಳು ಇವೆ. ತಾವು ಪಾರ್ಲಿಮೆಂಟ್‌ನಲ್ಲಿ ನಡೆದಿರುವಂಥಾದ್ದನ್ನು ತೆಗೆದು ನೋಡಿ. ಬೇರೆ ಬೇರೆ ರಾಜ್ಯಗಳ ಅಸೆಂಬ್ಲಿಗಳಲ್ಲಿ ತೆಗೆದುಕೊಂಡಿರುವಂಥಾದ್ದನ್ನು ನೀವು ನೋಡಿ. ಅದರಲ್ಲಿ ಇನ್ನೊಂದು ಇದೆ. ನೀವು ಈಗ ರೂಲ್ಸ್ ಪುಸ್ತಕ ಎಲ್ಲವನ್ನೂ ಸಸ್ಪೆಂಡ್ ಮಾಡಿ, ಅವರು ಏನಾದರೂ objectional matter ಅನ್ನು ಹೇಳಿದರೆ, ಅದನ್ನು expunge ಮಾಡುವುದರ ಜೊತೆಗೆ, ಬೇರೆ ಯಾರಾದರೂ ಎದ್ದು ನಿಂತುಕೊಂಡು, ಡಿಬೇಟ್‌ನಲ್ಲಿ participate ಮಾಡುವುದಕ್ಕೆ ಅವಕಾಶ ಇದೆ. They can question what the Hon'ble Member says. When that is so, what I request is that becomes a very, very bad precedent. There is no emergency declared in this country. Still our Constitution is there. We are functioning very much under the Constitution and the Rule book and I think so, Sir, there

is no alternative for the Chair other than providing an opportunity to the Hon'ble Member to express his opinion.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕಂಥ ವಿಚಾರದಲ್ಲಿ, ಯಾವುದೇ ಆಕ್ಷೇಪಣೆಗಳು ಇಲ್ಲ. ಆದರೆ ಪ್ರತಿಯೊಂದು ನಿಯಮಾವಳಿಗಳನ್ನು ನಾವು ರಚನೆ ಮಾಡುವಾಗ, ಒಂದು ನಿಯಮಾವಳಿ, ಮತ್ತೊಂದು ನಿಯಮಾವಳಿಗಳನ್ನು ನಿಯಂತ್ರಿಸುವಂತಹ ರೀತಿಯಲ್ಲಿ, ಅವುಗಳನ್ನು ಕ್ರಮಾಂಕದ ಮೂಲಕವಾಗಿ ತೆಗೆದುಕೊಂಡು ಬರುತ್ತಾರೆ. ಇಲ್ಲಿ ನಿಯಮ 328 ಮತ್ತು ಹಾಗೆ ಸಂಬಂಧಪಡುವಂತಹ ನಿಯಮ 332 ಕೂಡ ನೇರವಾದ ಸಂಬಂಧವಾಗಿ ಇರುವಂಥಾದ್ದು ಆಗಿದೆ. ಮತ್ತೆ Shakdher & Kaul ನಲ್ಲಿ ಈ ವಿವರಗಳನ್ನು ಕೊಡುವಂಥಾದ್ದು, 'Practice and procedure of Parliament ನಲ್ಲಿ, ಅದರ ಸಂಬಂಧದಲ್ಲಿ 'Resignation of a Member' ಎನ್ನತಕ್ಕಂಥ ಒಂದು chapter ಇದೆ. 'Arrangement of business and list of business' ಅವರು ಮಾಡುತ್ತಾ, ಯಾರು resignation ಕೊಡುತ್ತಾರೆ. 'Statement by a Member who has resigned the office' ಎಂದು ಆ ವಿಚಾರಗಳನ್ನು ಕೊಡುವಾಗ, ಅವರು ವೈಯಕ್ತಿಕವಾದ ವಿವರಗಳನ್ನು ಕೊಡಬಹುದು. ಆ ವೈಯಕ್ತಿಕ ವಿವರಗಳು ಮಾತ್ರ ಅಷ್ಟಕ್ಕೆ ಸೀಮಿತ ಆಗಿರಬೇಕೆನ್ನುವಂಥಾದ್ದು. ನಿಯಮ 332ರಂತೆ ವೈಯಕ್ತಿಕ ವಿವರಣೆಗಳು ಇದನ್ನು ನಮ್ಮ ನಿಯಮಾವಳಿಗಳಲ್ಲಿ ಅಳವಡಿಸಿಕೊಂಡಿರತಕ್ಕಂಥಾದ್ದು ನಿಯಮ 328ಕ್ಕೆ ನೇರವಾದ ಸಂಬಂಧಗಳೂ ಕೂಡ ಇರುತ್ತದೆ. ನಿಯಮ 328ರಲ್ಲಿ ಈ ರೀತಿ ಇದೆ. "ಸದಸ್ಯರು ಅಧ್ಯಕ್ಷರಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ, ಮಂತ್ರಿಗಳು ಉತ್ತರ ನೀಡುವ ಉದ್ದೇಶಕ್ಕಾಗಿ ತನಿಖೆ ನಡೆಸಲು ಸಾಧ್ಯವಾಗುವಂತೆ ಪೂರ್ವಮಾಹಿತಿಯನ್ನು ಕೊಟ್ಟಿದ್ದ ಹೊರತು, ಯಾವ ಸದಸ್ಯರು ಯಾವ ವ್ಯಕ್ತಿಯನ್ನು ಕುರಿತು ಅಪಮಾನಕರವಾದ ಅಥವಾ ಅಪರಾಧದ ಆಪಾದನೆ ಮಾಡುವ ಯಾವ ಆರೋಪವನ್ನು ಮಾಡತಕ್ಕುದಲ್ಲ. ಅಲ್ಲದೆ ಅಧ್ಯಕ್ಷರು ಅಂಥ ಆರೋಪವು ಸದನದ ಮರ್ಯಾದೆಗೆ ಕುಂದುತರುವಂತಹದು ಅಥವಾ ಅದರಿಂದ ಯಾವುದೇ ಸಾರ್ವಜನಿಕ ಹಿತಾಸಕ್ತಿ ಸಾಧಿತವಾಗುವುದಿಲ್ಲ ಎಂದು ಅಭಿಪ್ರಾಯ ಪಡುವುದಾದರೆ, ಯಾವುದೇ ಸಂದರ್ಭದಲ್ಲಿ ಯಾರೇ ಸದಸ್ಯರು ಅಂಥ ಯಾವುದೇ ಆರೋಪ ಮಾಡುವುದನ್ನು ನಿಷೇಧಿಸಬಹುದು... ಎಂದು ಹೇಳುತ್ತಾ, ಯಾರ್ಯಾರು ಇದನ್ನೆಲ್ಲಾ ಹೇಳಿದ್ದು ಎಂದು ಹೇಳುತ್ತಾ, ಅವರು ಇಲ್ಲದೇ ಇದ್ದಂಥ ಸಂದರ್ಭ ಬಂದಾಗಲೂ ಕೂಡ ಅವರು ಆ ವಿಚಾರಗಳ ಬಗ್ಗೆ ವೈಯಕ್ತಿಕವಾದ ವಿವರಗಳನ್ನು ದೈನಂದಿನ ನಮ್ಮ ಕಾರ್ಯಪಟ್ಟಿಯಲ್ಲಿ ಇಲ್ಲದಿದ್ದರೂ ಕೂಡ ಅದನ್ನು ಹೇಳಬೇಕು ಎಂದು ನಿಯಮ 328ರಿಂದ ಹಿಡಿದು 332ರವರೆಗೆ ವೈಯಕ್ತಿಕ ವಿವರಣೆಗಳು ಎಂದು ಇದೆ. One inter-related to the other section and other provision. Another governs the other section also. ವೈಯಕ್ತಿಕ ವಿವರಣೆಗಳನ್ನು ಕೊಡತಕ್ಕಂಥ ಸಂದರ್ಭದಲ್ಲಿ ಅದು ಆಪಾದನೆಗಳು ಬಂದಾಗ ಮಾತ್ರ ಎಂದು

ಹೇಳಿ, ಕೌಲ್ ಅಂಡ್ ಶಕ್ಧರ್‌ನಲ್ಲಿ, ಮಲ್ಹೋತ್ರದಲ್ಲಿ ಈ ಎಲ್ಲಾ ವಿಚಾರಗಳು ಬಂದಿರತಕ್ಕಂಥ ಹಿನ್ನಲೆಯಲ್ಲಿ ತಾವು ಈ ವಿಚಾರವನ್ನು ತಮ್ಮ ವಿವೇಚನೆಯ ಮೂಲಕ ತೀರ್ಮಾನ ಕೊಡಬೇಕು. ರಾಜೀನಾಮೆಯನ್ನು ಅಂಗೀಕರಿಸುವುದು, ಬಿಡುವುದು ತಮಗೆ ಬಿಟ್ಟಿರತಕ್ಕಂಥ ವಿಷಯ. ಅದನ್ನು ಫಾರ್ಮಾಟ್ ಪ್ರಕಾರವೇ ಕೊಟ್ಟಿದ್ದೇನೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ತಮ್ಮ ವಿವೇಚನೆಗೆ ಬಿಟ್ಟಿರತಕ್ಕಂಥಾದ್ದು. ಆದರೆ, ನಿಯಮಗಳು ಈ ರೀತಿ ಇರುವುದರಿಂದ, ಅವರ ಹೇಳಿಕೆಗೆ ಅವಕಾಶವಿಲ್ಲ ಎನ್ನುವಂಥಾದ್ದನ್ನು ವಿನಮ್ರದಿಂದ ಸದನದಲ್ಲಿ ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರಕಾಶ್‌ರವರು ಸಂಸದೀಯ ಸಚಿವರಾಗಿ ಹೇಳಿದ್ದನ್ನೇ ಪದೇ ಪದೇ ಹೇಳುತ್ತಿದ್ದಾರೆ. ರಾಜೀನಾಮೆ ಕೊಡುವುದು ಬೇಡ ಎಂದು ನಮ್ಮ ಅನಿಸಿಕೆಯಾಗಿದೆ ಎನ್ನುವ ಒಂದು ಮಾತನ್ನು ಅವರು ಹೇಳಿದರು. ಅದಕ್ಕಾಗಿ, ವೈಯಕ್ತಿಕವಾಗಿ ನಿಮಗೆ ಧನ್ಯವಾದಗಳು. ಆದರೆ ನನ್ನನ್ನು ಉಪ ಮುಖ್ಯಮಂತ್ರಿಯ ಸ್ಥಾನದಿಂದ ತೆಗೆದು ಹಾಕಿದಾಗ ಅವರು ಸುಮ್ಮನಿದ್ದರು. ನಾನು ಇವುಗಳನ್ನೆಲ್ಲಾ ಹೇಳಲು ಹೋಗಲಿಲ್ಲ. ಅದೆಲ್ಲಾ ಇರಲಿ ಬಿಡಿ. ನಾನು ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬಾರದು ಎಂದು ಹೇಳಿರುವಿರಲ್ಲಾ, ಅದಕ್ಕಾಗಿ ನಿಮಗೆ ಧನ್ಯವಾದಗಳನ್ನು ಹೇಳುತ್ತೇನೆ, ಅದಕ್ಕೆ ನಾನು ನಿಮಗೆ ಚಿರಋಣಿ. ನನಗೆ ನೀವು ಇಷ್ಟಾದರೂ ಹೇಳಿದಿರಲ್ಲಾ ಎಂದು ಸಂತೋಷವಾಗುತ್ತಿದೆ. ಅದೇನೇ ಇರಲಿ, ನಾನು ವೈಯಕ್ತಿಕವಾಗಿ ಏನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಒಬ್ಬ ಮಂತ್ರಿ ಸರ್ಕಾರದಲ್ಲಿದ್ದುಕೊಂಡು, ರಾಜೀನಾಮೆ ಕೊಟ್ಟರೆ ಅವರಿಗೆ ಹೇಳಿಕೆ ಕೊಡಲಿಕ್ಕೆ ಅವಕಾಶವಿದೆ. Why not the same principle is applicable to any Member who resigns? What is the difference between a Minister who resigns and a Member who resigns to his membership. What is the difference? What prevents me? ಬಹುಶಃ ನನಗನ್ನಿಸುತ್ತದೆ, ಈ ನಿಯಮಾವಳಿಗಳನ್ನು ರಚನೆ ಮಾಡತಕ್ಕಂಥ ಕಾಲದಲ್ಲಿ, ಸದನದ ಸದಸ್ಯರಾಗಿರುವವರು ಸದನ ನಡೆಯುವಾಗ ರಾಜೀನಾಮೆ ಕೊಡುತ್ತಾರೆ ಎನ್ನತಕ್ಕಂಥ ಊಹೆ ಮಾಡಿರಲಿಕ್ಕೆ ಸಾಧ್ಯವಿಲ್ಲ. ಹಾಗೆ ನಿರೀಕ್ಷೆ ಮಾಡಿರಲಿಕ್ಕಿಲ್ಲ. ಏಕೆಂದರೆ, ಇಂಥ ನಿದರ್ಶನಗಳು ಬಹಳ ಅಪರೂಪದ ನಿದರ್ಶನ ಗಳಾದುದರಿಂದ, ಇದಕ್ಕೆ ಬೇಕಾದಂಥ ನಿಯಮಾವಳಿಗಳನ್ನು ಮಾಡಬೇಕು ಎಂದು ಆವತ್ತು ಯೋಚನೆ ಮಾಡದೇ ಇರಬಹುದು. ಇಡೀ ನಿಯಮಾವಳಿಗಳನ್ನೇ ಸಸ್ಪೆಂಡ್ ಮಾಡತಕ್ಕಂಥ ಅಧಿಕಾರ ನಿಮಗಿರುವಾಗ ನಿಯಮಾವಳಿಗಳನ್ನು ಬದಿಗೊತ್ತಿ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟರೆ ತಪ್ಪಿಲ್ಲ. ಯಾವುದೇ ನಿರ್ದಿಷ್ಟವಾದಂಥ ನಿಯಮಾವಳಿ ಇಲ್ಲ ಎಂದು ಹೇಳುತ್ತಿದ್ದೀರಿ. Under Rule 332, you can give permission. ಆದ್ದರಿಂದ, ಕೊಡುವುದಕ್ಕೇ ಆಗುವುದಿಲ್ಲ ಎನ್ನತಕ್ಕಂಥ ಪರಿಸ್ಥಿತಿ ಇದೆಯಲ್ಲಾ, ಅದು ಸರಿಯಾದುದಲ್ಲ ಎಂದು ನನ್ನ ಭಾವನೆ. ಆದ್ದರಿಂದ, ದಯವಿಟ್ಟು ಇದನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಳ್ಳುವುದಕ್ಕೆ ಹೋಗಬಾರದು. ಇದರಲ್ಲಿ ಪ್ರತಿಷ್ಠೆಯ

ಪ್ರಶ್ನೆ ಏನಿಲ್ಲ. ಇದರಲ್ಲಿ ನಾನು ಯಾರಿಗೂ ಅಫೆಂಡ್ ಮಾಡತಕ್ಕಂಥ ಹೇಳಿಕೆಯನ್ನು ಕೊಡುವುದಕ್ಕೆ ಹೋಗುತ್ತಿಲ್ಲ. ಯಾರಿಗೂ ನೋವು ಮಾಡತಕ್ಕಂಥ ಹೇಳಿಕೆ ಕೊಡುವುದಕ್ಕೆ ಹೋಗುತ್ತಿಲ್ಲ. ಸರ್ಕಾರದ ಮೇಲೆ ಆರೋಪಗಳನ್ನು ಮಾಡುವುದಕ್ಕೆ ಹೋಗುತ್ತಿಲ್ಲ. ನನಗೂ ಗೊತ್ತಿದೆ. ಆರೋಪಗಳನ್ನು ಮಾಡಬೇಕಾದರೆ, ಭ್ರಷ್ಟಾಚಾರದ ಆರೋಪಗಳನ್ನು ಮಾಡಬೇಕಾದರೆ ನೋಟೀಸ್ ಕೊಟ್ಟು, ಅದಕ್ಕೆ ಅವಕಾಶವನ್ನು ಕೇಳಿ, ಅದಕ್ಕೆ ಬೇಕಾದಂಥ ದಾಖಲಾತಿಗಳನ್ನು ಒದಗಿಸಿದ ಮೇಲೆ ಮಾಡಬೇಕಾಗುತ್ತದೆ. ನನಗೂ ಇಂಥ ಪ್ರಾಥಮಿಕ ಜ್ಞಾನ ಇದೆ. ನಾನೂ ಸುಮಾರು ವರ್ಷಗಳ ಕಾಲ ಈ ಸದನದಲ್ಲಿ ಕೆಲಸ ಮಾಡಿದ್ದೇನೆ. ವಿರೋಧ ಪಕ್ಷದಲ್ಲಿ ಕೆಲಸ ಮಾಡದೇ ಇರಬಹುದು, ಆದರೆ ಆಡಳಿತ ಪಕ್ಷದಲ್ಲಿ ನಾಲ್ಕು ಬಾರಿ ಕೆಲಸ ಮಾಡಿದ್ದೇನೆ. ನನಗೂ ಸಾಕಷ್ಟು ಅನುಭವವಾಗಿದೆ. ಆದ್ದರಿಂದ ನೀವು ದಯಮಾಡಿ, ಅವಕಾಶವನ್ನೇ ಕೊಡಬಾರದು ಎನ್ನುವ ಮನಸ್ಥಿತಿಯನ್ನು ಬದಲಾವಣೆ ಮಾಡಿಕೊಳ್ಳಬೇಕು. I leave it for argument sake. There is no provision as such. There is no provision to permit a Member to make a personal statement. you have got the powers. You have got the inherent powers. You suspend the particular provision and allow me to speak. ಅದನ್ನು ತಾವು ಮಾಡಬಹುದು. ಆದ್ದರಿಂದ ದಯವಿಟ್ಟು ಹಾಗೆ ಮಾಡಬೇಕು.

ಅಧ್ಯಕ್ಷರು : ನಿಯಮ 202ರಲ್ಲಿ ಏನಿದೆ, ಫಾರ್ಮಾಟ್‌ನಲ್ಲಿ ಏನಿದೆ, ನಿಯಮಾವಳಿಗಳ ಪ್ರಕಾರ ಏನಿದೆ ಎನ್ನುವುದನ್ನೆಲ್ಲಾ ಓದಿದ್ದೀರಿ. ನಿಯಮ 332ರ ಕೆಳಗೆ, ವೈಯಕ್ತಿಕ ವಿವರಣೆಗಳನ್ನು ಯಾವ ಸಂದರ್ಭದಲ್ಲಿ ಕೊಡಬಹುದು ಎಂದು ಕೌಲ್ ಅಂಡ್ ಶಕ್ದರ್‌ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅದಲ್ಲದೆ, ಹಿಂದೆ ಇದೇ ತರಹ ವಿಶಾಖಪಟ್ಟಣದಲ್ಲಿ ಸ್ಟೀಲ್ ಮಿಲ್ಸ್ ಗಲಾಟೆಯಲ್ಲಿ ಆರೇಳು ಜನ ಲೋಕಸಭಾ ಸದಸ್ಯರು ರಾಜೀನಾಮೆ ಕೊಟ್ಟಾಗ ಆ ಬಗ್ಗೆ ಅವರು ಸ್ಟೇಟ್‌ಮೆಂಟ್‌ನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿಲ್ಲ. ಈ ಎಲ್ಲಾ ಕಾರಣಗಳಿಂದ, ವೈಯಕ್ತಿಕ ವಿವರಣೆ ಕೊಡುವುದಕ್ಕೆ ಅವಕಾಶ ಕೊಡಬೇಕು ಎಂದು ತಾವೇನು ಕೇಳಿದ್ದೀರಿ, ಅದನ್ನು ತಳ್ಳಿಹಾಕಿದೆ. ಈಗ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ.

(ಅಡಚಣೆ)

ಅಧ್ಯಕ್ಷರು : ಯಾವುದೇ ಸಂಪ್ರದಾಯವಿಲ್ಲ, ನಿಯಮಗಳಲ್ಲಿ ಅವಕಾಶವಿಲ್ಲ, ಹೊಸ ಸಂಪ್ರದಾಯವನ್ನು ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ.

(ಅಡಚಣೆ)

SRI SIDDARAMAIAH : Does it not amount to curtailment of my right?

(ಅಡಚಣೆ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ದಯಮಾಡಿ ಎಲ್ಲರೂ ಸಹಕರಿಸಬೇಕು. ಏಕೆಂದರೆ, ನಿಯಮಾವಳಿಗಳಲ್ಲಿ ಅವಕಾಶವಿಲ್ಲ. ಸಂಪ್ರದಾಯದಲ್ಲಿ ಅವಕಾಶವಿಲ್ಲ. ಆದ್ದರಿಂದ, ಇದಕ್ಕೆ ಹೊಸ ಸಂಪ್ರದಾಯವನ್ನು ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ, ಇದನ್ನು ತಳ್ಳಿಹಾಕಿದ್ದೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಎಲ್ಲರೂ ಸಹಕರಿಸಬೇಕು.

(ಅಡಚಣೆ)

ಶ್ರೀ ಸಿದ್ದರಾಮಯ್ಯ : ದಯವಿಟ್ಟು ನನಗೆ ಅಲೋ ಮಾಡಬೇಕು.

ಅಧ್ಯಕ್ಷರು : ಸಿದ್ದರಾಮಯ್ಯನವರೇ, ಅದನ್ನು ನಾನು ತಳ್ಳಿಹಾಕಿದ್ದೇನೆ. It is not on the agenda. ವೈಯಕ್ತಿಕ ವಿವರಣೆಯನ್ನು ನೀಡಲು ಏನು ಅವಕಾಶ ಕೇಳಿದ್ದೀರಿ, ಅದನ್ನು ಮಾಡಲು ಬರುವುದಿಲ್ಲ. ನಿಯಮಾವಳಿಗಳಲ್ಲಿ ಅವಕಾಶವಿಲ್ಲ. ಯಾವುದೇ ಸಂದರ್ಭದಲ್ಲೂ ಅದಕ್ಕೆ ಅವಕಾಶವಿಲ್ಲ. ಆದ್ದರಿಂದ ಅದನ್ನು ತಳ್ಳಿಹಾಕಲಾಗಿದೆ. ದಯಮಾಡಿ ಸಹಕರಿಸಿ.

(ಅಡಚಣೆ)

ಶ್ರೀ ಸಿದ್ದರಾಮಯ್ಯ : ತಾವು ನಮಗೆ ರಕ್ಷಣೆ ಕೊಡಬೇಕು. ತಾವೇ ನಮ್ಮ ಹಕ್ಕನ್ನು ರಕ್ಷಣೆ ಮಾಡದೇ ಹೋದರೆ ನಾವು ಯಾವ ಫೋರಂಗೆ ಹೋಗಬೇಕು?

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮಗೆ residuary powers ಇದೆ. ಎಲ್ಲವನ್ನೂ ಸಸ್ಪೆಂಡ್ ಮಾಡಿ ಅವಕಾಶ ಕೊಡುವುದಕ್ಕೂ ನಿಮಗೆ ಅಧಿಕಾರವಿದೆ. 332ರಲ್ಲಿ ಕೊಡುವುದಕ್ಕೂ ನಿಮಗೆ ಅಧಿಕಾರವಿದೆ. ಇಷ್ಟಿದ್ದರೂ ಕೂಡ, ನೀವು ಮರ್ಸಿಲೆಲ್‌ಲಿ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಮರ್ಸಿಲೆಸ್‌ಲಿ ಅಲ್ಲ. ನಿಯಮಗಳ ಪ್ರಕಾರ, ಸಂಪ್ರದಾಯದ ಪ್ರಕಾರ ಸದನವನ್ನು ನಡೆಸಬೇಕಾಗುತ್ತದೆ. ಈ ಪ್ರಜಾಪ್ರಭುತ್ವದಲ್ಲಿ ಎಲ್ಲಿಯೂ, ಅದು ಲೋಕಸಭೆಯಲ್ಲಾಗಬಹುದು ಅಥವಾ ಬೇರೆ ಕಡೆಗಳಲ್ಲಾಗಬಹುದು, ಇಂಥ ಒಂದು ಸಂಪ್ರದಾಯವಿಲ್ಲ. ಅದಕ್ಕೆ ನಿಯಮಾವಳಿಗಳಲ್ಲೂ ಅವಕಾಶವಿಲ್ಲ. ಆದ್ದರಿಂದ ದಯಮಾಡಿ ಸಹಕರಿಸಬೇಕು. ಅದಕ್ಕೆ ಅವಕಾಶವಿಲ್ಲ.

(ಅಡಚಣೆ)

ಶ್ರೀ ಸಿದ್ದರಾಮಯ್ಯ : ನಿಮ್ಮ ಈ ಅಮಾನವೀಯವಾದ ತೀರ್ಪನ್ನು ಪ್ರತಿಭಟಿಸಿ ನಾವು ಧರಣಿ ಮಾಡುತ್ತೇವೆ.

(ಈ ಹಂತದಲ್ಲಿ ಎ ಬಿ ಪಿ ಜೆ ಡಿ ಯ ಸದಸ್ಯರುಗಳಾದ ಸಿದ್ದರಾಮಯ್ಯ, ಮಹದೇವ, ಎಂ.ವೈ. ಮೇಟಿ, ವೈಜನಾಥ ಪಾಟೀಲ್, ಹೆಚ್.ಸಿ. ಮಹದೇವಪ್ಪ, ಕೆ. ವೆಂಕಟೇಶ್,

ಕೆ.ಎಂ. ಕೃಷ್ಣಮೂರ್ತಿ, ಸೋಮಶೇಖರ್ ಇವರುಗಳು ಧರಣಿ ನಡೆಸಲು ಸದನದ ಬಾವಿಗೆ ಬಂದರು)

(ಅಡಚಣೆ)

ಶ್ರೀ ಎನ್. ಧರಂಸಿಂಗ್ : ಮಾನ್ಯ ಅಧ್ಯಕ್ಷರೇ, ಅವರೇನು ಕೇಳಿದ್ದಾರೆ, ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಅವರು ಅವಕಾಶವನ್ನು ಕೇಳಿದ್ದಾರೆ. ಅವಕಾಶ ಕೊಡದಿದ್ದರೆ ಬಹಳ ತಪ್ಪಾಗುತ್ತದೆ. ಅವರು ಸ್ಟೇಟ್‌ಮೆಂಟ್ ಕೊಡತಕ್ಕಂಥಾದ್ದು ಅವರ ಹಕ್ಕಿದ್ದರೂ ಕೂಡ ತಾವು ಅವಕಾಶ ಕೊಡುತ್ತಿಲ್ಲ. ಇದರ ಬಗ್ಗೆ .....

MR. SPEAKER : With all respects to the Opposition Leader, ನಿಯಮಾವಳಿಗಳಲ್ಲಿ ಅದಕ್ಕೆ ಅವಕಾಶವಿಲ್ಲ. ಸಂಪ್ರದಾಯ ಎಲ್ಲಿಯೂ ಇಲ್ಲ, ...

(ಅಡಚಣೆ)

ಶ್ರೀ ಎನ್. ಧರಂಸಿಂಗ್ : ಅವಕಾಶ ಕೊಡಬಾರದು ಎಂದೇನೂ ಇಲ್ಲ.

(ಅಡಚಣೆ)

ಅಧ್ಯಕ್ಷರು : ಲೋಕಸಭೆಯಲ್ಲಾಗಲೀ, ವಿಧಾನಸಭೆಯಲ್ಲಾಗಲೀ ಈ ರೀತಿ ಆಗಿಲ್ಲ. ಆದ್ದರಿಂದ ಒಂದು ಹೊಸ ಸಂಪ್ರದಾಯವನ್ನು ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ.

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಲ್ಲವನ್ನೂ ಸಸ್ಪೆಂಡ್ ಮಾಡಿ ಕೊಡಬಹುದು.

(ಅಡಚಣೆ)

SRI M. MALLIKARJUN KHARGE : You can suspend all Rules. You have got every power. ನೀವು ಇಂಪಾರ್ಷಿಯಲ್ ಆಗಿ ಆಕ್ಟ್ ಮಾಡುತ್ತೀರಿ ಎಂದು ನಾವು ತಿಳಿದುಕೊಂಡಿದ್ದೇವೆ.

ಅಧ್ಯಕ್ಷರು : ನಿಯಮಾವಳಿಗಳಲ್ಲಿ ಅವಕಾಶವಿಲ್ಲ. I cannot set any new ....

(ಅಡಚಣೆ)

(ಈ ಹಂತದಲ್ಲಿ ವಿರೋಧ ಪಕ್ಷವಾದ ಕಾಂಗ್ರೆಸ್ ಪಕ್ಷದ ಸದಸ್ಯರು ಧರಣಿಗೆ ಸದನದ ಬಾವಿಗೆ ಬಂದರು)

(ಅಡಚಣೆ)

ಶ್ರೀ ಆರ್.ವಿ. ದೇಶಪಾಂಡೆ (ತಮ್ಮ ಸ್ಥಾನದಿಂದ) : ಅವರಿಗೆ ಅನುಮತಿ ಕೊಡಬೇಕು.

(ಅಡಚಣೆ)

ಅಧ್ಯಕ್ಷರು : ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಎಲ್ಲಿಯೂ ಇಲ್ಲ. ಬೇರೆ ರಾಜ್ಯದಲ್ಲಾಗಬಹುದು ಅಥವಾ ಲೋಕಸಭೆಯಲ್ಲಾಗಬಹುದು, ಎಲ್ಲಿಯೂ ಕೊಟ್ಟಿಲ್ಲ.

(ಅಡಚಣೆ)

ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ) : ಕಾಂಗ್ರೆಸ್ ಪಾರ್ಟಿಯವರು ಹೇಳಿದ ಹಾಗೆಲ್ಲಾ ಕೇಳುವುದಕ್ಕಲ್ಲ ಸ್ಪೀಕರ್ ಇಲ್ಲಿ ಇರುವುದು. ಇವರಿಗೆ ಇಷ್ಟಬಂದ ಹಾಗೆ ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಭಾರತ ದೇಶದಲ್ಲಿ ಕರ್ನಾಟಕ ವಿಧಾನಸಭೆಗೆ ಘನತೆ, ಗೌರವವಿದೆ. ಕಾಂಗ್ರೆಸ್ ಪಾರ್ಟಿಯಿಂದ ಹೇಳಿಸಿಕೊಳ್ಳಬೇಕಾದುದ್ದಿಲ್ಲ. ಇವರು ಹೇಳಿದ ಹಾಗೆಲ್ಲಾ ಕೇಳಬೇಕು ಎಂದೇನೂ ಇಲ್ಲ. ನಿಯಮಾನುಸಾರ ಹೇಳಿದ್ದಾರೆ.

(ಅಡಚಣೆ)

ಅಧ್ಯಕ್ಷರು : ಈಗ ಸದನವನ್ನು ಪುನಃ ಮಧ್ಯಾಹ್ನ 2-30 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1-21 ಗಂಟೆಗೆ ಭೋಜನ ಸಲುವಾಗಿ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 2-30 ಗಂಟೆಗೆ ಸಮಾವೇಶಗೊಳ್ಳಲು ನಿಃಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 2 ಗಂಟೆ 52 ನಿಮಿಷಕ್ಕೆ ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ವಿಷಯ: ಶ್ರೀ ಸಿದ್ದರಾಮಯ್ಯನವರಿಗೆ ಹೇಳಿಕೆ ನೀಡಲು ಅನುಮತಿ ನೀಡುವ ಬಗ್ಗೆ.

(ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದರು)

ಅಧ್ಯಕ್ಷರು : ಈಗ ಎಲ್ಲಾ ಸದಸ್ಯರು ದಯಮಾಡಿ ಅವರವರ ಸ್ಥಾನಗಳಿಗೆ ಹೋಗಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾವುಗಳು ನಿಯಮ ಬಾಹಿರವಾಗಿರತಕ್ಕಂಥದ್ದು ಯಾವುದನ್ನೂ ನಾವು ಕೇಳುತ್ತಿಲ್ಲ. ಇವತ್ತು ಮಾಜಿ ಉಪ ಮುಖ್ಯಮಂತ್ರಿಗಳಾಗಿರತಕ್ಕಂಥ ಮಾನ್ಯ ಸಿದ್ದರಾಮಯ್ಯನವರು ರಾಜೀನಾಮೆ ಕೊಟ್ಟಿದ್ದಾರೆ. ಹಾಗೆ ರಾಜೀನಾಮೆ ಕೊಡತಕ್ಕಂಥ ಕಾಲದಲ್ಲಿ ಸ್ವಲ್ಪ ಹೇಳಿಕೆಯನ್ನು ಹೇಳಬೇಕೆನ್ನತಕ್ಕಂಥದ್ದು ಅವರ ಇಚ್ಛೆ ಆಗಿದೆ. ಆದರೆ, ತಾವು ನಿಯಮಾವಳಿ ಪುಸ್ತಕ ತೆಗೆದುಕೊಂಡು ನಿಯಮಾವಳಿ ಪ್ರಕಾರ ಅವಕಾಶ ಇಲ್ಲವೆಂದು ಹೇಳಿದಾಗ ನಾವು ಪ್ರತಿಭಟನೆ ಬಿಟ್ಟು ಮತ್ತೇನು ಮಾಡಬೇಕಾಗುತ್ತದೆ? ಈ ಸದನದ ಎಲ್ಲಾ ಸದಸ್ಯರುಗಳ ಭಾವನೆಗಳನ್ನು ತಿಳಿದುಕೊಂಡು ಈ ಸದನವನ್ನು ನಡೆಸಬೇಕಾಗಿದೆ.

ವಿಶೇಷವಾಗಿ ಒಬ್ಬ ಹಿರಿಯ ಸದಸ್ಯರು ರಾಜೀನಾಮೆ ಕೊಡತಕ್ಕಂಥ ಕಾಲದಲ್ಲಿ ಏಕೆ ನಾನು ಕೊಡುತ್ತಿದ್ದೇನೆಂದು ಹೇಳುವುದಕ್ಕೆ ಅವಕಾಶ ಕಲ್ಪಿಸಿಕೊಡಿ ಎಂದು ಪದೇ ಪದೇ ಕೇಳುತ್ತಿದ್ದಾರೆ. ಹಾಗೆಯೇ ನಾವೂ ಕೂಡ ಅವಕಾಶ ಕೊಡಿ ಎಂದು ಕೇಳುತ್ತಿದ್ದೇವೆ. ಈ ರೀತಿಯಾದ ವರ್ತನೆಗಳು ಆದಂಥ ಸಂದರ್ಭದಲ್ಲಿ ತಾವು ರಕ್ಷಣೆ ಕೊಡಬೇಕು ಮತ್ತು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ಹಾಗೆಯೇ ಏನು ಹೇಳುತ್ತಾರೆಂಬುದನ್ನು ಕೇಳಬೇಕು. ಒಬ್ಬ ಮಾಜಿ ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡಿರತಕ್ಕಂಥ ಮಾನ್ಯ ಸಿದ್ದರಾಮಯ್ಯನವರು ಪಕ್ಷವನ್ನು ಬಿಟ್ಟು ಇವತ್ತು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಡತಕ್ಕಂಥ ಕಾಲದಲ್ಲಿ ಇದಕ್ಕೆ ಕಾರಣಗಳೇನು ಎನ್ನತಕ್ಕಂಥ ಸಂದೇಶ ಈ ರಾಜ್ಯದ ಜನತೆಗೆ ಗೊತ್ತಾಗಬೇಕಾಲ್ಲವೇ? ಅವರು ಈ ಸದನದ ಸದಸ್ಯರಾಗಿದ್ದಾರೆ. ತಾವು ಇವತ್ತು ಈ ಸದನದ ಅಧ್ಯಕ್ಷರಾಗಿದ್ದು, ಮತ್ತೆ ಅವರ ಜೊತೆಯಲ್ಲಿ ಕೆಲಸ ಮಾಡಿರುವುದಲ್ಲದೆ ಒಳ್ಳೆಯ ಸ್ನೇಹಿತರೂ ಕೂಡ ಆಗಿದ್ದೀರಿ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಇವತ್ತು ಅವರು ಪದೇ ಪದೇ ಕೇಳುತ್ತಿದ್ದಾರೆ. ಹಾಗೆಯೇ ನಮ್ಮ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ದೇಶಪಾಂಡೆಯವರು ಹಾಗೂ ಮಾನ್ಯ ಸಿಂಧ್ಯಾರವರೂ ಕೂಡ ಅವಕಾಶ ಕೊಡಬೇಕೆಂದು ಹೇಳಿದ್ದಾರೆ. ರೂಲ್‌ನಲ್ಲಿ ಏನೇ ಇದ್ದರೂ ಕೂಡ, ಒಮ್ಮೊಮ್ಮೆ ಅವೆಲ್ಲವನ್ನೂ ಬದಿಗಿಟ್ಟು ಅವಕಾಶ ಕಲ್ಪಿಸಿಕೊಡಬೇಕು. **ಸದನ ಸರಿಯಾದ ರೀತಿಯಲ್ಲಿ ನಡೆಯತಕ್ಕಂಥ ಕಾಲದಲ್ಲಿ ತಾವೇ ಅಡ್ಡಿಪಡಿಸುತ್ತಿದ್ದೀರಿ.** ಇದನ್ನು ನಾವೇನೂ ಮಾಡುತ್ತಿಲ್ಲ. ನಮ್ಮ ಹಕ್ಕನ್ನು ನಾವು ಕೇಳುತ್ತಿದ್ದೇವಷ್ಟೆ. ಆದ್ದರಿಂದ ಅವರು ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು. ಇಲ್ಲದಿದ್ದರೆ ನಾವು ಪ್ರತಿಭಟನೆಯನ್ನು ಮುಂದುವರಿಸಿಕೊಂಡು ಹೋಗುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಾನು ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರನ್ನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ.

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದಂಥ ಕಾಂಗ್ರೆಸ್ ಪಕ್ಷದ ಸದಸ್ಯರು ಮಾನ್ಯ ಆರಗ ಜ್ಞಾನೇಂದ್ರರವರು ಮಾತನಾಡುವುದಕ್ಕೆ ಅಡ್ಡಿಪಡಿಸುತ್ತಿದ್ದರು)

ನಾನು ಏನು ಹೇಳುತ್ತೇನೆಂಬುದು ಕೇಳಿ. ಮಾನ್ಯ ಸಿದ್ದರಾಮಯ್ಯನವರ ಬಗ್ಗೆ ವಿಶೇಷವಾದಂಥ ಗೌರವ ಇದೆ. ಆದರೆ ನಾವು ಹೇಳಿದ ಹಾಗೆ ಈ ಸಭೆಯ ನಿಯಮಾವಳಿಗಳನ್ನು ಮಾಡಬೇಕು. ಮತ್ತೆ ಈ ಸಭೆಯಲ್ಲಿ ಯಾವುದೇ ನಿಯಮಾವಳಿಗಳು ಇಲ್ಲ. ನಾವು ಹೇಳಿದ ಹಾಗೆ ಸಭೆ ನಡೆಸಬೇಕೆಂದು ಅಥವಾ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಹಾಗೆ ನಡೆಸಬೇಕೆಂದು ಆರಂಭದಿಂದಲೂ ಕೂಡ ಸದನ ನಡೆಯದ ಹಾಗೆ ಇವರು ತಡೆಯುತ್ತಿದ್ದಾರೆ. ಸದನದಲ್ಲಿರತಕ್ಕಂಥ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಇವರಿಗೆ ಇಷ್ಟವಿಲ್ಲ. ಪದೇ ಪದೇ ಎಲ್ಲಾ ವಿಷಯಕ್ಕೂ ಸದನದ ಬಾವಿಗೆ ಹಾರುವುದು ಮತ್ತು ಸದನದ ಬಾವಿಯಲ್ಲೇ ನಿಂತುಕೊಂಡು ಮಾತನಾಡುವುದು ಸರಿಯಲ್ಲ. ಈ ರಾಜ್ಯದ ಜನ ಇವರಿಗೆ ಖಂಡಿತವಾಗಿಯೂ ಬುದ್ಧಿ ಕಲಿಸುತ್ತಾರೆ.

(ಅಡಚಣೆ)

ಅಧ್ಯಕ್ಷರು : ನಾನು ಹೇಳುವುದನ್ನು ದಯವಿಟ್ಟು ಕೇಳಿ. "If there was no rule it could be done under the residuary powers vested in the Speaker. The leader of the House agreed that the rules might be amended. The Speaker observed that so long as there was a definite rule that reasons shall not be given, members could not be permitted to make the statement under residuary powers. There are rulings. In this case I cannot use my residuary powers." ಆ ಸಂಪ್ರದಾಯಗಳಿಲ್ಲ. ಮತ್ತೆ ನಿಯಮಾವಳಿಯಲ್ಲಿ ಅವಕಾಶ ಇಲ್ಲ. ಈಗ ಅವರು ರಾಜೀನಾಮೆ ಕೊಡುವವರಿದ್ದಾರೆ.

ಶ್ರೀ ಎನ್. ಧರ್ಮಸಿಂಗ್ : ನಿಮ್ಮ ಮೇಲೆ ಆರೋಪ ಮಾಡುತ್ತಿಲ್ಲ. ಮತ್ತೆ ಬೇರೆ ಹೇಳಿಕೆಗಳನ್ನು ವ್ಯಕ್ತಪಡಿಸುವುದಕ್ಕೆ ನಾನು ಬಯಸುವುದಿಲ್ಲ. ಆದರೆ ರಾಜೀನಾಮೆ ಏಕೆ ಕೊಡುತ್ತಿದ್ದೇನೆಂಬುದರ ಬಗ್ಗೆ 5 ನಿಮಿಷದಲ್ಲಿ ನನ್ನ ಮಾತನ್ನು ಹೇಳಿ ಮುಗಿಸುತ್ತೇನೆಂದು ಅವರು ಕೇಳಿದ್ದಾರೆ. ಆದರೆ, ತಾವು ನಿಯಮಾವಳಿಗಳ ಪುಸ್ತಕವನ್ನು ತಂದು ತೋರಿಸತಕ್ಕಂಥದ್ದು.....

(ಅಡಚಣೆ)

ಅಧ್ಯಕ್ಷರು : ನಾನು ನಿಯಮಗಳಿಗೆ ಬದ್ಧನಾಗಿ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಆ ಸಂಪ್ರದಾಯಗಳಿಗೆ ಬದ್ಧನಾಗಿ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಹೊಸ ಸಂಪ್ರದಾಯ ಮಾಡುವುದಕ್ಕೆ ಆಗುವುದಿಲ್ಲ. Even residuary powers cannot be exercised in similar cases ಎಂದು ರೂಲಿಂಗ್ ಕೂಡ ಇದೆ. ಈ ಒಂದು ಕಾರಣದಿಂದ ನಾನು ಅದನ್ನು ತಳ್ಳಿ ಹಾಕಿದ್ದೇನೆ. ಆದ್ದರಿಂದ ಅದನ್ನು ಮತ್ತೆ ರೀ ಓಪನ್ ಮಾಡುವುದಕ್ಕೆ ಅವಕಾಶ ಇಲ್ಲ. ಆದ್ದರಿಂದ, ದಯಮಾಡಿ ಆ ವಿಚಾರವನ್ನು ಬಿಟ್ಟು ಬೇರೆ ವಿಷಯಗಳ ಕಲಾಪವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಿ.

(ಅಡಚಣೆ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ದಯವಿಟ್ಟು ಇದಕ್ಕೆ ತಾವು ಅವಕಾಶ ಕೊಡಬಾರದು.

ಅಧ್ಯಕ್ಷರು : ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 56 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 17ನೇ ಜುಲೈ 2006ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಃಶ್ಚಯಿಸಿತು).